# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Good Opportunity for Branding
1,20,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 228 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.03.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 228 • PRGI No:KARKAN/2023/88055 • VIJAYANAGARA • 15.03.2025 • Saturday • Page:04 • Rs:2


### ಎಪಿಎಂಸಿ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ, ಲೆಕ್ಕ ಪರೀಕ್ಷಕ ಕೆ.ರಾಜು, ನಗರಸಭೆ ಪರಿಸರ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಸೂಚನೆ

# ಉಪಲೋಕಾಯುಕ್ತರು ವಿವಿಧೆಡೆ ದಿಢೀರ್‌ಭೇಟಿ

# ಉತ್ತರಿಸಲು ತತ್ತರಿಸಿ ಬೆವರಿದ ಅಧಿಕಾರಿಗಳು

## ರೈತರಿಗೇಕಿಲ್ಲ ವಿಶ್ರಾಂತಿ ಕೊಠಡಿ? | ತೂಕದ ತಕ್ಕಡಿಯಲ್ಲಿ ಬಯಲಾದ ಕುತಂತ್ರ | ರೈತರಿಂದ ಕಮಿಷನ್ ಪಡೆದರೆ ಕ್ರಮ

## ಚರಂಡಿ ನೀರೇ ಕೃಷಿಗೆ ಬಳಕೆ | ಕೆಲಸ ಮಾಡದ ಸಂಸ್ಕರಣ ಘಟಕ | ಕಲುಷಿತ ನೀರಲ್ಲಿ ಬೆಳೆದ ಆಹಾರ ಸೇವನೆ

■ ಹಂಪಿ ಟೈಮ್ಸ್ ಹೊಸಪೇಟೆ

ಉಪ ಲೋಕಾಯುಕ್ತರಾದ ಬಿ.ವೀರಪ್ಪ ನೇತೃತ್ವದ ತಂಡ ಶುಕ್ರವಾರ ಬೆಳಿಗ್ಗೆ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಗೆ ದಿಢೀರ್ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆಯನ್ನು ಕಂಡು ಅಧಿಕಾರಿಗಳಿಗೆ ಮೈಚಳಿ ಬಿಡಿಸಿದರು.

ಪ್ರತಿ ನಿತ್ಯ ನಡೆಯುವ ತರಕಾರಿ ಮಾರುಕಟ್ಟೆಯಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ಲಭ್ಯತೆ, ಶೌಚಾಲಯದ ವ್ಯವಸ್ಥೆ ಇಲ್ಲದಿರುವುದನ್ನು ಕಂಡು, ನಮಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತೀಯಾ, ಉತ್ಪನ್ನಗಳ ಗುಣಮಟ್ಟ, ಕ್ರಮಬದ್ದ ವಹಿವಾಟು ಬಗ್ಗೆ ಪರಿಶೀಲನೆ ನಡೆಸುತ್ತಿಲ್ಲ ಎಂದು ಎಪಿಎಂಸಿ ಕಾರ್ಯದರ್ಶಿ ಸಿದ್ದಯ್ಯಸ್ವಾಮಿಗೆ ತರಾಟೆ ತೆಗೆದುಕೊಂಡರು. ಇದೇ ವೇಳೆ ವೀರೇಶ್ ಎಂಬಾತ ಎಪಿಎಂಸಿಯಲ್ಲಿ ರೈತರಿಂದ ಶೇ.10 ರಷ್ಟು ಕಮೀಷನ್ ಪಡೆಯುತ್ತಿದ್ದಾರೆಂದು ಆರೋಪಿಸಿದರು. ಸಂತೆಯಲ್ಲಿ ಬಟಾಣಿಗೆ ಕಲರ್ ಹಾಕಿ ಮಾರುತ್ತಿರುವುದು ಕಂಡು ಲೋಕಾಯುಕ್ತರು ಅಹಾರ ಸುರಕ್ಷತಾ ಅಧಿಕಾರಿಗೆ ಪರಿಶೀಲಿಸಲು ಸೂಚಿಸಿದರು. ಎಸ್.ಹೆಚ್.ಆರ್. ಟ್ರೇಡರ್ಸ್ ರಸೀತಿ ಪುಸ್ತಕವನ್ನು ಪರಿಶೀಲಿಸಿದರು. ರೈತರಿಂದ ಕಮಿಷನ್ ಸಂಗ್ರಹಿಸುವುದು ತಪ್ಪು. ಹಾಗೇನಾದರೂ ಸಂಗ್ರಹಿಸುತ್ತಿದ್ದರೇ ಕೂಡಲೇ ಕೈಬಿಡಬೇಕು ಇಲ್ಲದಿದ್ದರೇ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು. ದಲಾಲಿ ಅಂಗಡಿಗಳಿಗೆ ಹಂಚಿಕೆಯಾದ ಸಂಪೂರ್ಣ ವಿವರದೊಂದಿಗೆ ವರದಿ ನೀಡಲು ಸೂಚಿಸಿದರು.



ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ರೈತ ಭವನ ಇಲ್ಲ, ರೈತರು ವಿಶ್ರಾಂತಿ ಪಡೆಯಲು ಸ್ಥಳಾವಕಾಶ ಎಲ್ಲಿದೆ? ರೈತ ಭವನ ಬಾಡಿಗೆ ನೀಡಲು ಬೈಲಾದನ್ವಯ ಅವಕಾಶ ಇದಿಯಾ? ಅವಕಾಶ ಇದ್ದಲ್ಲಿ ಆದೇಶ ಪ್ರತಿ ನೀಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬಳಿಕ ಅಪೂರ್ಣ ಹಾಜರಾತಿ ಪುಸ್ತಕ, ಬೈಲಾ ನಮೂನೆ 16 ನಮೂದಾಗಿರುವುದಿಲ್ಲ. ನಮೂನೆ 24(9) ಉಲ್ಲಂಘನೆ, ಎಪಿಎಂಸಿ ಅಧಿಕಾರಿಗಳ ಫೋನ್‌ಪೇ, ಗೂಗಲ್‌ಪೇ ಪರಿಶೀಲಿಸಿದರು. ಚಲನವಲನ ಪುಸ್ತಕ ನಮೂದು ಆಗದಿರುವುದನ್ನು ಕಂಡು ಗರಂ ಆದ ಉಪಲೋಕಾಯುಕ್ತರು ಎಪಿಎಂಸಿ ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿ ಮತ್ತು ಲೆಕ್ಕ ಪರೀಕ್ಷಕ ಕೆ.ರಾಜು ವಿರುದ್ಧ ಪ್ರಕರಣ ದಾಖಲಿಸಲು ಸೂಚಿಸಿದರು.

ಬಳಿಕ ಹೊಸಪೇಟೆ ಸಮೀಪದ 88 ಮುದ್ಲಾಪುರ ಗ್ರಾಮದಲ್ಲಿರುವ ಒಳಚರಂಡಿ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಕೊಳಚೆ ಚರಂಡಿ ನೀರನ್ನು ನೇರ ಕೃಷಿ ಬಳಕೆ ಹರಿಸುತ್ತಿರುವುದನ್ನು ಗಮನಿಸಿದ ಲೋಕಾಯುಕ್ತರು ಇಂತಹ ಕಲುಷಿತ ನೀರಿನಿಂದ ಬೆಳೆದ ಬೆಳೆಯಿಂದ ಜನಸಾಮಾನ್ಯರಿಗೆ ಆಹಾರ ವಿಷಕಾರಿ ಯಾಗಲಿದೆ. ಸಂಸ್ಕರಣಾ ಘಟಕದಲ್ಲಿ ನೀರಿನ ಶುದ್ಧಿಕರಣ ಗುಣಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಇದರಿಂದ ನದಿ ನೀರು ಮಲೀನಗೊಳ್ಳಲಿದೆ. ಪರಿಸರ ಅಧಿಕಾರಿ ಯಾವ ಪ್ರಕರಣವನ್ನು ದಾಖಲಿಸಿಲ್ಲ, ನಗರಸಭೆ ಹಾಗೂ ಪರಿಸರ ಇಲಾಖೆ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಲು ಸೂಚಿಸಿದರು.

ನಗರದಲ್ಲಿರುವ ಎಲ್‌ಎಲ್‌ಸಿ ಕಾಲುವೆ ಬಳಿ ಭೇಟಿ ನೀಡಿ ಮಹಿಳೆಯರು ಕಾಲುವೆಯಲ್ಲಿ ಬಟ್ಟೆ ತೊಳೆಯುವುದನ್ನು ಗಮನಿಸಿ, ನೀರಿನ ರಭಸಕ್ಕೆ ಮಹಿಳೆಯರಿಗೆ ಪ್ರಾಣಾಪಾಯ ಹಾಗೂ ನದಿ ನೀರು ಮಲೀನವಾಗುವುದನ್ನು ತಡೆಗಟ್ಟಲು ಬಟ್ಟೆ ತೊಳೆಯಲು ಕಾಲುವೆ ಪಕ್ಕದಲ್ಲಿ ಪ್ರತ್ಯೇಕ ಜಾಗ ಗುರುತಿಸಿ ಅಲ್ಲಿ ಪೈಪ್‌ಲೈನ್ ಹಾಗೂ ಶೆಲ್ಟರ್ ಅಳವಡಿಸಿ ವ್ಯವಸ್ಥೆ ಕಲ್ಪಿಸಬೇಕೆಂದು ನಗರಸಭೆ ಆಯುಕ್ತ ಮನೋಹರ್‌ಗೆ ಸೂಚಿಸಿದರು. ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಎಎಸ್ಪಿ ಸಲೀಂ ಪಾಷಾ, ಎಸಿ ವಿವೇಕಾನಂದ, ತಹಸೀಲ್ದಾರ್ ಎಂ.ಶೃತಿ, ಇತರ ಅಧಿಕಾರಿಗಳಿದ್ದರು.

### ಎಪಿಎಂಸಿ ತೂಕದ ಯಂತ್ರದಲ್ಲಿ 2 ಕೆಜಿ ವ್ಯತ್ಯಾಸ ಕ್ರಮಕ್ಕೆ ಸೂಚನೆ

ಎಪಿಎಂಸಿ ಆಡಳಿತ ಕಚೇರಿಗೆ ತೆರಳಿ ತೂಕದ ಯಂತ್ರವನ್ನು ಪರಿಶೀಲಿಸಿದರು. ಖುದ್ದು ಉಪಲೋಕಾಯುಕ್ತರು ಯಂತ್ರದ ಮೇಲೆ ನಿಂತು ತೂಕ ಪರೀಕ್ಷಿಸಿದರು. ಆದರೆ 2 ಕೆಜಿಯಷ್ಟು ವ್ಯತ್ಯಾಸ ಕಂಡು ಬಂದಿದ್ದು, ಯಂತ್ರವನ್ನು ಸೀಜ್ ಮಾಡಿ ಪ್ರಕರಣ ದಾಖಲಿಸುವಂತೆ ತೂಕ ಮತ್ತು ಅಳತೆ ಅಧಿಕಾರಿ ಅಮೃತ್ ಚೌವ್ಹಾಣ್‌ಗೆ ವರದಿ ನೀಡಲು ಆದೇಶಿಸಿದರು.

### ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

### ಆನಂದ ಬಾಣ





ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com


-: ಪ್ರಯತ್ನಿಸು :-

ನೀವು ಹಲವು ಬಾರಿ ಸೋಲಬಹುದು ಆದರೆ ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

# ಸರ್ಕಾರಿ ಕಡತದಲ್ಲಿ ಖಾಸಗಿ ವ್ಯಕ್ತಿ ನಿರಂತರ ಸಹಿ ಬಾಯ್ಬಿಡದ ಆರ್‌ಟಿಒ ಅಧಿಕಾರಿಗಳು, ಅರೆಸ್ಟ್‌ಗೆ ಸೂಚನೆ

**ಕೂಡಲೇ ಕಾರ್ತಿಕ್ ಎಂಬಾತನನ್ನು ಅರೆಸ್ಟ್ ಮಾಡಲು ಹೆಚ್ಚುವರಿ ಪೊಲೀಸ್ ಅಧಿಕ್ಷಕರಿಗೆ ಉಪ ಲೋಕಾಯುಕ್ತರಿಂದ ಆದೇಶ**



■ ಹಂಪಿ ಟೈಮ್ಸ್ ಹೊಸಪೇಟೆ

ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಖಾಸಗಿ ವ್ಯಕ್ತಿ ಆಗಮಿಸಿ ವಾಹನ ನೊಂದಣಿ ನವೀಕರಣದ ಸ್ವೀಕೃತಿ ವಹಿಗೆ ಸಹಿ ಮಾಡಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ಕಾರ್ತಿಕ್ ಎಂಬುವ ವ್ಯಕ್ತಿಯನ್ನು ಅರೆಸ್ಟ್ ಮಾಡುವಂತೆ ಹೆಚ್ಚುವರಿ ಪೊಲೀಸ್ ಅಧೀಕ್ಷಕರಿಗೆ ಉಪ ಲೋಕಾಯುಕ್ತರಾದ ಬಿ.ವೀರಪ್ಪನವರು ಸ್ಥಳದಲ್ಲಿಯೇ ಆದೇಶ ಮಾಡಿದರು.

ಅವರು ಶುಕ್ರವಾರ ಪ್ರಾದೇಶಿಕ ಸಾರಿಗೆ ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಕಡತಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ಕಾರ್ತಿಕ್ ಸಾರಿಗೆ ಕಚೇರಿಯಲ್ಲಿ 2024 ರ ಜುಲೈನಿಂದ 2025 ರ ಫೆಬ್ರವರಿವರೆಗೆ ವಾಹನ ನೊಂದಣಿ ನವೀಕರಣ ಸ್ವೀಕೃತಿ ವಹಿಯಲ್ಲಿ ನಿರಂತರವಾಗಿ ಸಹಿ ಮಾಡಿರುವುದನ್ನು ಪತ್ತೆಹಚ್ಚಿದರು.

ಈ ಖಾಸಗಿ ವ್ಯಕ್ತಿ ಯಾರೆಂದು ಸಾರಿಗೆ ಅಧಿಕಾರಿಗಳಿಂದ ಹಾಗೂ ವಾಹನ ನಿರೀಕ್ಷಕರನ್ನು ಪ್ರಶ್ನಿಸಿದಾಗ ಯಾರೊಬ್ಬರೂ ಸಹ ಈ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ನೀಡಲಿಲ್ಲ, ಇದಕ್ಕೆ ಕೋಪಗೊಂಡ ಉಪ ಲೋಕಾಯುಕ್ತರು ನಿಮಗೆಲ್ಲಾ ನಾಚಿಕೆಯಾಗಬೇಕು, ಖಾಸಗಿ ವ್ಯಕ್ತಿ ಸರ್ಕಾರಿ ಕಚೇರಿಗೆ ಬಂದು ನಿರಂತರವಾಗಿ ಸಹಿ ಮಾಡುತ್ತಾನೆ ಎಂದರೆ ಏನು ಮಾಡುತ್ತಿದ್ದೀರಿ ತಿಳಿಸಿ ಇದರ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ. ಮುಂದಿನ ತನಿಖೆ ಎದುರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಸರ್ಕಾರಿ ಸೇವಾ ನಿಯಮಗಳ ಕೊರತೆ:** ಸರ್ಕಾರಿ ಕಚೇರಿಗಳಲ್ಲಿ ನಿಯಮಬಾಹಿರವಾಗಿ ಕ್ಯಾಶ್‌ಲೆಸ್ ವಹಿವಾಟು ನಡೆಯುತ್ತಿದೆ. ಸೇವಾ ನಡತೆ ನಿಯಮಗಳನ್ವಯ ಯಾವುದೇ ಸರ್ಕಾರಿ ಅಧಿಕಾರಿ, ನೌಕರ 5 ಸಾವಿರಕ್ಕಿಂತ ಹೆಚ್ಚು ಬೇರೊಬ್ಬರಿಗೆ ವರ್ಗಾವಣೆ ಹಾಗೂ ಪಡೆದುಕೊಳ್ಳಲು ಅನುಮತಿ ಪಡೆದಿರಬೇಕು. ಆದರೆ ಬಹುತೇಕ ಸರ್ಕಾರಿ ಸೇವಾ ಸಿಬ್ಬಂದಿಗಳು ಇದನ್ನು ಪಾಲನೆ ಮಾಡದಿರುವುದು ಕಂಡು ಬಂದಿದೆ. ಆರ್.ಟಿ.ಓ ಕಚೇರಿಯಲ್ಲಿ ಗ್ರೂಪ್ ಸಿ ಮಹಿಳಾ ಸಿಬ್ಬಂದಿ ರೂ.12 ಲಕ್ಷ ಬ್ಯಾಂಕ್ ನಿಂದ ಸಾಲ ಪಡೆದು ಅದನ್ನು ತನ್ನ ಸಂಬಂಧಿಕರಿಗೆ ವರ್ಗಾವಣೆ ಮಾಡಿ ನಗದು ಪಡೆದುಕೊಳ್ಳಲಾಗಿದೆ ಎಂಬ ಉತ್ತರಕ್ಕೆ ಅವರ ಒಂದು ವರ್ಷದ ಬ್ಯಾಂಕ್ ಸ್ಟೇಟ್‌ಮೆಂಟ್ ಕಳುಹಿಸಲು ಸೂಚನೆ ನೀಡಿದರು.

### ಕಾರ್ಮಿಕ ಇಲಾಖೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗೆ ಮಾಸಿಕ 24 ಸಾವಿರ ಸಂಬಳ, ವಹಿವಾಟು 50 ಸಾವಿರಕ್ಕಿಂತ ಅಧಿಕ

# ಕರೆಯಲ್ಲೂ ಕರಾಮತ್ತು ಬಯಲು

**ಮಹಿಳಾ ಸಿಬ್ಬಂದಿ ಮೊಬೈಲ್‌ನಿಂದಲೇ ಕಾರ್ಮಿಕ ನಿರೀಕ್ಷಕರಿಗೆ ಕರೆ ಮಾಡಿಸಿ ಮಹಿಳೆಯಂತೆ ಮಾತನಾಡಿದ ಉಪ ಲೋಕಾಯುಕ್ತರು**

■ ಹಂಪಿ ಟೈಮ್ಸ್ ಹೊಸಪೇಟೆ

ಕಾರ್ಮಿಕ ಇಲಾಖೆಯಲ್ಲಿ ಆನ್ ಲೈನ್ ಮೂಲಕ ಕ್ಯಾಶ್‌ಲೆಸ್ ವಹಿವಾಟಿನಲ್ಲಿ ಭಾಗಿ ಯಾದ ಹೊರಗುತ್ತಿಗೆ ಸಿಬ್ಬಂದಿ ಹಾಗೂ ಕಾರ್ಮಿಕ ನಿರೀಕ್ಷಕರ ವ್ಯವಹಾರವನ್ನು ಪರಿಶೀಲನೆ ನಡೆಸಲು ವಿವರ ವರದಿ ನೀಡಬೇಕೆಂದು ಉಪ ಲೋಕಾಯುಕ್ತರಾದ ಬಿ.ವೀರಪ್ಪನವರು ಸ್ಥಳದಲ್ಲೇ ಆದೇಶಿಸಿದರು.

ಅವರು ಶುಕ್ರವಾರ ಸರ್ಕಾರಿ ಕಚೇರಿಗೆ ಭೇಟಿ ನೀಡಿದ ವೇಳೆ ಕಾರ್ಮಿಕ ಇಲಾಖೆಗೂ ಅನಿರೀಕ್ಷಿತ ಭೇಟಿ ನೀಡಿದ ವೇಳೆ ಕಡತಗಳನ್ನು ಪರಿಶೀಲನೆ ನಡೆಸಿದರು. ಅಲ್ಲಿನ ಸಿಬ್ಬಂದಿಗಳ ಮೊಬೈಲ್‌ಗಳನ್ನು ಪರಿಶೀಲನೆ ನಡೆಸಿದಾಗ ಕೆಲವು ಸಿಬ್ಬಂದಿಗಳು



ಫೋನ್ ಪೇ, ಗೂಗಲ್ ಪೇ ಡಿಲಿಟ್ ಮಾಡಿದ್ದರು. ಸಿಂಧೂ ಎಂಬ ಮಹಿಳೆ ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದು ಮೊಬೈಲ್ ಪರಿಶೀಲನೆ ಮಾಡಿದಾಗ ಪಡೆಯುತ್ತಿರುವ ಸಂಬಳ ರೂ.24 ಸಾವಿರ ಆದರೆ ತಿಂಗಳಲ್ಲಿ ವ್ಯವಹರಿಸಿರುವುದು 54 ಸಾವಿರಕ್ಕಿಂತಲೂ ಹೆಚ್ಚು, ಯಾರಿಂದ ಸ್ವೀಕರಿಸಲಾಗಿದೆ ಎಂದು ಪರಿಶೀಲಿಸಿದಾಗ ಗಂಗಾವತಿಯಲ್ಲಿರುವ ಕಾರ್ಮಿಕ ನಿರೀಕ್ಷಕರಿಂದ ಆನ್‌ಲೈನ್ ಪೇಮೆಂಟ್ ಆಗಿರುವುದು ಕಂಡು ಬಂದಿತು.

ಮಹಿಳಾ ಸಿಬ್ಬಂದಿ ಮೊಬೈಲ್ ನಿಂದಲೇ ಕಾರ್ಮಿಕ ನಿರೀಕ್ಷಕರಿಗೆ ಕರೆ ಮಾಡಿಸಿ ಉಪ ಲೋಕಾಯುಕ್ತರೇ ಮಹಿಳೆಯಂತೆ ಮಾತನಾಡಿ ನಂತರ ಮಹಿಳಾ ಸಿಬ್ಬಂದಿಗೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿ ಯಾರೋ ಬೇರೆಯವರು ಮಾತನಾಡಿದರು ಎಂದು ಬಹಳ ಖಾಸಗಿಯಾಗಿ ಮಾತನಾಡಿದ್ದನ್ನು ಪರಿಗಣಿಸಿದರು. ನಿರೀಕ್ಷಕರು ಕಾಲ್ ಮೀ ಎಂದು ಮೆಸೇಜ್ ಹಾಕಿದ್ದನ್ನು ನೋಡಿ ಪುನಃ ವಾಪಸ್ ಕರೆ ಮಾಡಿಸಿದಾಗ ಬಟ್ಟೆ ಅಂಗಡಿ, ಕ್ರಷರ್, ಥಿಯೇಟರ್‌ದು ಬರುತ್ತದೆ ಎಂದು ಮಾತನಾಡಿದಾಗ ಉಪಲೋಕಾಯುಕ್ತರು ಪ್ರಕರಣ ದಾಖಲಿಸಿ ಪರಿಶೀಲನೆ ನಡೆಸಲು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಗೆ ಆದೇಶಿಸಿದರು.




## ಸ್ಟುಡೆಂಟ್ ಕಾಲಂ

# ಅತಿಥಿ ಮಾಡಿದ ಅನಾಹುತ



ಅರಮನೆಯ ರಾಜನ ಶಯನ ಗೃಹದಲ್ಲಿ ಒಂದು ಅಲಂಕಾರ ಕೃತವಾದ ಮಂಚವಿತ್ತು. ಆ ಮಂಚದಲ್ಲಿ" ಮಂದ ವಿಸ್ಪರ್ಣಿ "ಎಂಬ ಬಿಳಿಯ "ಹೇನು ತನ್ನ ಕುಟುಂಬದೊಂದಿಗೆ ವಾಸುಸುತ್ತಿತ್ತು. ತನ್ನ ಹೆಂಡತಿ ಮಕ್ಕಳು ಮೊಮ್ಮಕ್ಕಳೊಂದಿಗೆ ಸೇರಿ ಆ ಹೇನು, ರಾಜನ ರಕ್ತವನ್ನು ಆಸ್ವಾದಿಸುತ್ತಾ ಕಾಲ ಕಳೆಯುತ್ತಿತ್ತು. ಒಮ್ಮೆ ಅಲ್ಲಿಗೆ ಎಲ್ಲಿಂದಲೋ ಅಲೆಯುತ್ತಾ "ಅಗ್ನಿ ಮುಖ" ಎಂಬ ತಿಗಣೆಯೂ ಬಂತು. ಅದನ್ನು ನೋಡಿ ಬೇಸರದಿಂದ ಹೇನು ಹೇಳಿತು. ಹೇ ಅಗ್ನಿ ಮುಖ ಇಲ್ಲಿಗೇಕೆ ಬಂದಿರುವೆ? ಇದು ರಾಜನ ಮಲಗುವ ಮಂಚ ನಿಮ್ಮಂತವರಿಗೆಲ್ಲಾ ಇಲ್ಲಿ ಸ್ಥಳವಿಲ್ಲ ಯಾರಾದರೂ ನೋಡವ ಮೊದಲೇ ಬೇಗನೆ ಇಲ್ಲಿಂದ ಹೊರಟು ಹೋಗು. ತಿಗಣೆ ಎಂದಿತು.

ಮನೆಗೆ ಬಂದವನು ವೈರಿಯಾದರೂ ಹೀಗೆ ಹೇಳುವುದು ಸರಿಯಲ್ಲ, ನೀಚ ಜನರು ಮನೆಗೆ ಬಂದರೂ ಸಜ್ಜನರಾದವರು, ಅವರನ್ನು ಬನ್ನಿ ಕುಳಿತುಕೊಳ್ಳಿ. ಎನ್ನುತ್ತಾ ಕುಶಲೋಪರಿಗಳಿಂದ ಉಪಚರಿಸುತ್ತಾರೆ. ನಾನು ಅನೇಕ ಮನುಷ್ಯರ ಅನೇಕ ವಿಧವಾದ ರಕ್ತವನ್ನು. ಅವರ ಆಹಾರ ಅನುಗುಣವಾಗಿ ಕಾರ ಕಹಿ, ಒಗರು, ಹುಳಿ ಮುಂತಾದಗಳುಳ್ಳ ರಕ್ತವನ್ನು ಸೇವಿಸುತ್ತೇನೆ. ಆದರೆ ನಾನು ಎಂದೂ ಅಮೃತ ಸಮನಾದ ರಕ್ತವನ್ನು ಆಸ್ವಾದಿಸಿಲ್ಲ, ಅನ್ನ, ಪಾನ, ಖಾದ್ಯ ಮುಂತಾದ ವಿವಿಧ ಆಹಾರಗಳ ಸೇವೆಯಿಂದ ಅಮೃತ ಸಮನಾದ ರಾಜನ ರಕ್ತವನ್ನು ಆಸ್ವಾದಿಸಿ ನಾಲಿಗೆ ಸುಖವನ್ನು ಪಡೆಯುವೆನು, ರಾಜನಿಗಾಗಲೇ ಅಥವಾ ದರಿದ್ರನಾಗಲಿ ನಾಲಿಗೆಯ ಸುಖ ಒಂದೇ ರೀತಿ ಇರುತ್ತದೆ. ಆ ಸಾರಭೂತವಾದ ನಾಲಿಗೆ ಸುಖಕ್ಕಾಗಿ ಜನರು ದುಡಿಯುವುದು. ಒಂದು ವೇಳೆ ಈ ಲೋಕದಲ್ಲಿ ನಾಲಿಗೆಯ ಸುಖವನ್ನು ಕೊಡುವ ಕಾರ್ಯವು ಇಲ್ಲದಿದ್ದಲ್ಲಿ ಯಾರು ಯಾರ ಸೇವಕರು ಆಗುತ್ತಿರಲಿಲ್ಲ ಹಾಗೂ ಯಾರು ಮತ್ತೊಬ್ಬರ ವಶದಲ್ಲಿ ಇರುತ್ತಿರಲಿಲ್ಲ ಸುಳ್ಳು ಹೇಳುವುದು ಅಯೋಗ್ಯನಾದವನ ಸೇವೆ ಮಾಡುವುದು ಇವೆಲ್ಲವೂ ಹೊಟ್ಟೆಪಾಡಿಗಾಗಿ ಮಾಡುವುದು. ನಾನು ಹಸಿವಿನಿಂದ ಬಳಲಿ ಆಹಾರಕ್ಕಾಗಿ ನಿನ್ನ ಮನೆಗೆ ಬಂದಿರುವೆನು ಹೀಗೆ ನೀವೊಬ್ಬರೇ ರಾಜನ ರಕ್ತವನ್ನ ಹೀರುವುದು ಸರಿಯಲ್ಲ ಎಂದಿತು ಅಗ್ನಿ ಮುಖ ತಿಗಣೆ.

ಅದನ್ನು ಕೇಳಿ ಮಂದ ವಿಸ್ಪರ್ಣಿ ತಿಗಣಿಯೇ ನಾನು ರಾಜನು ನಿದ್ದೆ ಮಾಡಿದಾಗ ಅವನ ರಕ್ತವನ್ನು ಹಿರುತ್ತೇನೆ ಆದಾರೆ ನೀನು, ಅಗ್ನಿ ಮುಖ ಕಚ್ಚಿ ರಾಜನಿಗೆ ಉರಿ ಬರಿಸುತ್ತೀಯಾ ಆದ್ದರಿಂದ ನನ್ನ ಜೊತೆಗೆ ಮಾತ್ರ ರಕ್ತಪಾನವನ್ನು ಮಾಡುವುದಾದರೆ ಇಲ್ಲಿ ಇದ್ದು ಆಸ್ವಾದಿಸು. ಎಂದಿತು ವಿಸ್ಪರ್ಣಿ ಹೇನು ಅದಕ್ಕೆ. ಅಗ್ನಿಮುಖ ತಿಗಣೆಯು ಹಾಗೆ ಮಾಡುವೆನು ಎಂದಿತು. ರಾಜನ ರಕ್ತವನ್ನು ಮೊದಲು ನೀನು ಇರೋವರೆಗೆ ನಾನು ರಕ್ತವನ್ನು ಇರುವುದಿಲ್ಲ ಎಂದು ದೇವ ಗುರುಗಳ ಮೇಲೆ ಆಣೆ ಮಾಡುತ್ತೇನೆ. ಅವರು ಹೀಗೆ ಮಾತನಾಡುತ್ತಿರಲು ರಾಜನ ಮಂಚವನ್ನು ಏರಿ ಮಲಗಿಕೊಂಡನು. ಆಗ ತಿಗಣೆ ಜೀವ ಚಾಪಲ್ಯದಿಂದ ಅತ್ಯಂತ ಉತ್ಸಾಹದಿಂದ ರಾಜನು ನಿದ್ರೆ ಜಾರುವ ಮುಂಚೆ ಅವನನ್ನು ಕಚ್ಚಿತು. ಉಪದೇಶದಿಂದ ಒಬ್ಬನು ಸ್ವಾಭಾವವನ್ನು ಬದಲಿಸಲು ಸಾಧ್ಯವೇ? ತಣ್ಣಗಿರುವುದು ನೀರಿನ ಸ್ವಭಾವ. ಅದನ್ನು ಬಿಸಿ ಮಾಡಿದರು ಅದು ಮತ್ತೆ ತಣ್ಣಗಾಗುವುದಿಲ್ಲವೇ. ಒಂದು ವೇಳೆ ಬೆಂಕಿಯು ತಣ್ಣಗಾಗಬಹುದು. ಚಂದ್ರನು ಸುಡುವಂತೆ ಆಗಬಹುದು ಆದರೆ ಮನುಷ್ಯನ ಸ್ವಭಾವವನ್ನು ಬದಲಾಯಿಸಲು ಸಾಧ್ಯವಿಲ್ಲ. ಆಗ ರಾಜನು ಸೂಜಿಯ ಮೋನಿಯಿಂದ ಸುಚ್ಚಿದಂತೆ ಆಗಿ ತಕ್ಷಣವೇ ಹಾಸಿಗೆ ಎಂದೆದ್ದು ಹೇಳಿದನು. ಅರೆ ಇಲ್ಲಿ ನೋಡಿ ನನಗೆ ಏನೋ ಕಚ್ಚಿತು ಈ ಹೊದಿಕೆಯಲ್ಲಿ ತಿಗಣೆ ಇರಬೇಕು. ಆಗ ಸೇವಕರು ಕೂಡಲೇ ಹೊದಿಕೆಯನ್ನು ಹಿಡಿದು ಸೂಕ್ಷ್ಮವಾಗಿ ಹುಡುಕಲು ತೊಡಗಿದರು. ಆಗ ತಿಗಣೆಯು ತಕ್ಷಣ ಮಂಚದ ಒಳಭಾಗವನ್ನು ಸೇರಿಕೊಂಡಿತು ಆದರೆ ಹೊದಿಕೆಯ ಸಂಧಿಯಲ್ಲಿದ್ದ ಹೇನು ಹಾಗೂ ಅದರ ಇಡೀ ಕುಟುಂಬವನ್ನು ಸೇವಕರು ಹುಡುಕಿ ಅದನ್ನು ಕೊಂದರು.

**ನೀತಿ ಪಾಠ:** ನಿಮ್ಮ ಮನೆಯಲ್ಲಿ ಇನ್ನೊಬ್ಬರಿಗೆ ಆಶ್ರಯ ನೀಡುವ ಮೊದಲು ಎರಡು ಬಾರಿ ಯೋಚಿಸಬೇಕು. ಮತ್ತೆ ನಿಮ್ಮ ಅತಿಥಿಗಳು ಮಾಡುವ ಅನಾಹುತಗಳಿಂದ ನಿಮ್ಮ ಜೀವನ ಸಂಕಷ್ಟಕ್ಕೀಡಾಗಬಹುದು

– ಕೆ ಲಕ್ಷ್ಮಿ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹೋಳಿ ಹಬ್ಬಕ್ಕಿದೆ ಪೌರಾಣಿಕ ನಂಟು

ಒಂದು ಕ್ಷಣ ಕಣ್ಣು ಮುಚ್ಚಿಕೊಂಡು ಈ ಜಗತ್ತನ್ನು ಕಲ್ಪನೆ ಮಾಡಿಕೊಳ್ಳಿ ಎಲ್ಲವೂ ಕೇವಲ ಬಿಳಿ ಇಲ್ಲವೇ ಕೇವಲ ಕಪ್ಪು ಬಣ್ಣವನ್ನು ಹೊಂದಿದ್ದರೆ ಹೇಗಿರುತ್ತದೆ ಎಂದು?. ಬೆಳ್ಳನೆಯ ಮೋಡ, ಬೆಳ್ಳನೆಯ ವಿಶಾಲ ಸಮುದ್ರ, ಬೆಳ್ಳನೆಯ ಗಿಡ ಮರಗಳು, ಬೆಳ್ಳನೆಯ ರಸ್ತೆಗಳು, ಬೆಳ್ಳನೆಯ ದೇಹದ ಆಕೃತಿಗಳು ಅಬ್ಬಬ್ಬಾ ಯಾವುದೂ ಚೆನ್ನಾಗಿರುವುದಿಲ್ಲ. ಅಷ್ಟರಲ್ಲಿಯೇ ಕಪ್ಪು ಮತ್ತು ಬಿಳಿ ಎರಡು ಬಣ್ಣಗಳನ್ನು ಕೂಡಿಸಿದ ಬಣ್ಣ ತುಸು ಹೆಚ್ಚೇ ಮನಮೋಹಕ ಎನಿಸುತ್ತದೆ.

ಆದರೆ ಹಲವಾರು ಬಣ್ಣಗಳನ್ನು ಹೊಂದಿರುವ ಈ ಪ್ರಕೃತಿ ಅತ್ಯಂತ ಸುಂದರ, ನಯನ ಮನೋಹರವಾಗಿರುತ್ತದೆ. ಬಣ್ಣವಿಲ್ಲದ ಬದುಕು ಬರಡು ಎನಿಸುತ್ತದೆ. ಆಕಾಶದಲ್ಲಿ ತಿಳಿ ನೀಲಿ ಮೋಡಗಳು ಮತ್ತು ಕಪ್ಪು ಮೋಡಗಳು, ಹಸಿರು ಹಾಸಿದ ಗಿಡಮರಗಳು, ಆಕಾಶದ ನೀಲಿಯನ್ನೇ ಹೊದ್ದ ತಿಳಿ ನೀಲ ಸಾಗರ, ಕಪ್ಪನೆಯ ಟಾರು ರಸ್ತೆಗಳು, ಬೆಳ್ಳನೆಯ ಬೆಳ್ಳಕ್ಕಿಗಳು, ವಿಧವಿಧ ಬಣ್ಣದ ಪಕ್ಷಿಗಳು, ಪ್ರಾಣಿಗಳು ಹೀಗೆ ಬಣ್ಣಮಯ ಲೋಕ ನಮ್ಮದು. ಈ ಬಣ್ಣ ಬಣ್ಣದ ಲೋಕವನ್ನು ಬಣ್ಣಿಸಲು ಪದಗಳು ಸಾಲದಾಗುತ್ತವೆ ಎಂದರೆ ಅದು ಅತಿಶಯೋಕ್ತಿಯೇನಲ್ಲ!!

ಬಣ್ಣಗಳು ಕೂಡ ನಮ್ಮ ಮನಸ್ಸಿನ ಭಾವಗಳನ್ನು ಸೂಚಿಸುತ್ತವೆ. ನಮ್ಮ ಮನಸ್ಸು ಅತ್ಯಂತ ಉದಾಸ ಸ್ಥಿತಿಯಲ್ಲಿದ್ದಾಗ ಊದಾ ಬಣ್ಣದ ಗೋಡೆಗಳು ಇಷ್ಟವಾದರೆ ತಿಳಿ ನೀಲಿ ಮತ್ತು ತಿಳಿ ಹಸಿರು ಬಣ್ಣ ಕಣ್ಣಿಗೆ ಮತ್ತು ಮನಸ್ಸಿಗೆ ಹಿತವನ್ನು ನೀಡುತ್ತವೆ. ಕೆಂಪು ಗುಲಾಬಿಯ ಬಣ್ಣ ಪ್ರೀತಿಯ ದೋತಕವಾದರೆ ಬಿಳಿ ಶಾಂತಿಯ ಸೂಚಕ. ಹಳದಿ ಬಣ್ಣ ಸ್ನೇಹವನ್ನು ಸೂಚಿಸಿದರೆ ಹಸಿರು ಸಮೃದ್ಧಿಯ ಸಂಕೇತ. ಹಲವಿಧದ ಬಣ್ಣಗಳನ್ನು ತನ್ನ ಗರಿಗಳಲ್ಲಿ ಅಡಗಿಸಿಕೊಂಡಿರುವ ನವಿಲು ನಮ್ಮ ರಾಷ್ಟ್ರ ಪಕ್ಷಿ. ಬಣ್ಣಗಳು ಭಾವನೆಗಳನ್ನು ಅರಳಿಸುತ್ತವೆ.... ಅಂತೆಯೇ ಬಣ್ಣದ ಹಬ್ಬವು ಕೂಡ. ಕೆಲ ಹಬ್ಬಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳು ಪ್ರಮುಖ ಪಾತ್ರವನ್ನು ವಹಿಸಿದರೆ ಮತ್ತೆ ಕೆಲ ಹಬ್ಬಗಳಲ್ಲಿ ನಮ್ಮಲ್ಲಿ ಅಡಗಿ ಕುಳಿತಿರುವ ತುಂಟತನ, ಪೋಲಿತನಗಳನ್ನು ಹೊರ ಹಾಕುವ ಹಬ್ಬವಾಗಿರುತ್ತದೆ. ಪ್ರತಿ ವರ್ಷ ಹೋಳಿ ಹುಣ್ಣಿಮೆಯ ಆಸುಪಾಸಿನಲ್ಲಿ ಜರುಗುವ ಈ ಬಣ್ಣದ ಹಬ್ಬ ನಮ್ಮ ಬದುಕಿಗೆ ನವ ಚೈತನ್ಯವನ್ನು ತರುತ್ತದೆ ಎಂದರೇ ಅಚ್ಚರಿಯೇನಲ್ಲ.

ಪೌರಾಣಿಕ ಐತಿಹ್ಯಗಳ ಪ್ರಕಾರ ಶಿವನ ಪತ್ನಿಯಾದ ಸತಿ ದೇವಿಯು ತನ್ನ ತಂದೆ ದಕ್ಷ ರಾಜನು ನಡೆಸುತ್ತಿದ್ದ ಯಜ್ಞಕ್ಕೆ ಆಹ್ವಾನವಿಲ್ಲದೆ ಹೋಗುವುದು ಬೇಡ ಎಂಬ ಗಂಡನ ಆಣತಿಯನ್ನು ಮೀರಿ ತವರು ಮನೆಯ ಕಾರ್ಯಕ್ರಮವೆಂದು ಹೋಗಿ ಅಲ್ಲಿ ತನ್ನ ತಂದೆಯಿಂದಲೇ ಅವಮಾನಿತಳಾಗಿ ಯಜ್ಞ ಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಪತ್ನಿಯನ್ನು ಕಳೆದುಕೊಂಡ ಮಹಾದೇವ ರೌದ್ರಾವೇಶದಿಂದ ಆಕೆಯ ದೇಹವನ್ನು ಹೊತ್ತು ತಿರುಗುತ್ತಿದ್ದಾಗ ಆತನ ಆವೇಶಕ್ಕೆ ಇಡೀ ಪ್ರಪಂಚ ನಡುಗುತ್ತಿತ್ತು. ಶಿವನ ಕೋಪವು ವೈಪರೀತ್ಯಕ್ಕೆ ತಿರುಗಬಾರದು ಎಂಬ ಕಾರಣದಿಂದ ಮಹಾವಿಷ್ಣು ತನ್ನ ಸುದರ್ಶನ ಚಕ್ರವನ್ನು ಬಳಸಿ ಸತಿ ದೇವಿಯ ದೇಹವನ್ನು ಚಿದ್ರಗೊಳಿಸಿದನು. ಈಗಾಗಲೇ ಸುಟ್ಟು ಹೋದ ಆಕೆಯ ದೇಹದ ಭಾಗಗಳು ಅಖಂಡ ಭಾರತದ 54 ಸ್ಥಳಗಳಲ್ಲಿ ಬೀಳಲ್ಪಟ್ಟು 54 ಶಕ್ತಿ ಪೀಠಗಳು ಆವಿರ್ಭವಿಸಿದವು. ಮಹಾವಿಷ್ಣು ಶಿವನನ್ನು ಶಾಂತಗೊಳಿಸಿದ ನಂತರ ಇವನು ಉಗ್ರ ತಪಸ್ಸನ್ನು ಆಚರಿಸಲು ಹೊರಟು ಹೋದನು. ಅದಕ್ಕೂ ಮುನ್ನ ತಾರಕಾಸುರನು ಭೋಲಾಶಂಕರನ ಏಳು ದಿನದ ಮಗುವಿನಿಂದ ಮಾತ್ರ ತನಗೆ ಮರಣ ಬರಲಿ ಎಂದು ಬ್ರಹ್ಮದೇವನಿಂದ ವರ ಪಡೆದಿದ್ದನು. ಭಕ್ತ ಪ್ರಿಯ ಬ್ರಹ್ಮನು ತಥಾಸ್ತು ಎಂದು ಹೇಳಿಯೂ ಆಗಿತ್ತು. ನಂತರ ತಾರಕಾಸುರನ ಕೋಟಲೆಗಳು ಒಂದಲ್ಲ ಎರಡಲ್ಲ ಇಡೀ ಪೃಥ್ವಿಯ ಜನರನ್ನು ಆತ ಅತ್ಯಂತ ಕ್ರೂರವಾಗಿ ಕಾಡಲಾರಂಭಿಸಿದನು. ದೇವತೆಗಳಿಗೂ ಆತನ ಕಾಟದ ಬಿಸಿ ತಗುಲಿದಾಗ ಅವರೆಲ್ಲರೂ ಸೇರಿ ಬ್ರಹ್ಮ ಮತ್ತು ವಿಷ್ಣುವನ್ನು ಭೇಟಿಯಾಗಿ ತಮ್ಮ ಸಂಕಷ್ಟವನ್ನು ಹೇಳಿಕೊಂಡರು. ಇದೀಗ ಬ್ರಹ್ಮ ವಿಷ್ಣು ಮತ್ತು ದೇವತೆಗಳು ಸೇರಿ ಘೋರ ತಪಸ್ಸಿನಲ್ಲಿ ನಿರತನಾದ ಶಿವನ ವಿವಾಹವನ್ನು ಹಿಮವಂತ ಮತ್ತು ಮೇನಾ ದೇವಿಯರ ಪುತ್ರಿ ಗಿರಿಜಾದೇವಿಯೊಂದಿಗೆ ಮಾಡುವ ಆಶಯಕ್ಕೆ ಬೆಂಬಲವಾಗಿ ಶಿವನನ್ನು ಎಚ್ಚರಿಸುವ ಮಹಾ ಕಾರ್ಯಕ್ಕೆ ಕಾಮದ ಅಧಿದೇವತೆಯಾದ ಮನ್ಮಥನಿಗೆ ಒಪ್ಪಿಸಿದರು. ಶಿವನನ್ನು ಎಚ್ಚರಗೊಳಿಸುವ ಈ ಮಹಾಮಣಿಹದಲ್ಲಿ ತನ್ನ ಪ್ರಾಣ ಹೋಗುವದೆಂಬ ಅರಿವಿದ್ದರೂ ಕೂಡ ಲೋಕ ಕಲ್ಯಾಣಕ್ಕಾಗಿ ಈ ಕಾರ್ಯವನ್ನು ಒಪ್ಪಿಕೊಂಡ ಕಾಮದೇವನು ತನ್ನ ಪತ್ನಿ ರತಿದೇವಿಯೊಂದಿಗೆ ಶಿವನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದು ಅಲ್ಲೊಂದು ಸುಂದರ ಲೋಕವನ್ನು ಸೃಷ್ಟಿಸಿ ಪತ್ನಿಯೊಂದಿಗೆ ಮೋಹಕವಾಗಿ ನೃತ್ಯ ಮಾಡಿ ಶಿವನ ಮನಸ್ಸನ್ನು ತಣಿಸಲು ಪ್ರಯತ್ನಿಸಿದನು. ಕಾಮ ದೇವ ಮತ್ತು ರತಿದೇವಿಯರ ಸಾಕಷ್ಟು ಪ್ರಯತ್ನದ ನಂತರ ಕೂಡ ಶಿವ ಎಚ್ಚರಗೊಳ್ಳದೆ ಹೋದಾಗ ಅಂತಿಮ ಪ್ರಯತ್ನವಾಗಿ ಕಾಮ ದೇವನು ಪುಷ್ಪ ಬಾಣವನ್ನು ಶಿವನೆಡೆಗೆ ಬಿಟ್ಟನು. ಪುಷ್ಪಬಾಣ ಸೋಕಿದ ಶಿವನು ಎಚ್ಚರ ಗೊಂಡು ತನ್ನ ತಪಸ್ಸನ್ನು ಕೆಡಿಸಲು ಯತ್ನಿಸಿದ ಕಾಮ ದೇವನನ್ನು ತನ್ನ ಮೂರನೇ ಕಣ್ಣ ತೆರೆದು ಸುಟ್ಟುಬಿಟ್ಟನು. ಆಗ ಅಲ್ಲಿಯೇ ಇದ್ದ ರತಿ ದೇವಿಯು ಲೋಕ ಕಲ್ಯಾಣಕ್ಕಾಗಿ ದೇವತೆಗಳ ಆಗ್ರಹದ ಮೇರೆಗೆ ತನ್ನ ಪತಿ ಈ ಕಾರ್ಯಕ್ಕೆ ಎಳಸಿದ ನೆಂದು ತನಗೆ ಪತಿ ಭಿಕ್ಷೆ ನೀಡಬೇಕೆಂದು ಶಿವನನ್ನು ಕೇಳಿಕೊಂಡಳು. ಆಗ ಶಿವನು ಕಾಮದೇವನು ಆಕೆಯ ಕಣ್ಣಿಗೆ ಮಾತ್ರ ಕಾಣುವಂತೆ ವರ ನೀಡಿ ಇಡೀ ಲೋಕದ ಪಾಲಿಗೆ ಮನ್ಮಥನು ಅನಂಗನಾಗಿ ಇರುವಂತೆ ವರ ನೀಡಿದನು. ಈ ಅನಂಗ ವ್ಯಕ್ತಿತ್ವವೇ ನಮ್ಮ ನಿಮ್ಮೊಳಗಿರುವ ಕಾಮ. ಕಾಮ ಎಂದರೆ ಕೇವಲ ದೈಹಿಕ ಲಾಲಸೆಯಲ್ಲ ಅದು ನಮ್ಮ ನಿಮ್ಮೊಳಗೆ ಅಡಗಿರುವ ಆಸೆಯ ಮೂರ್ತ ರೂಪ. ಅರಿಷಡ್ವರ್ಗಗಳಲ್ಲಿ ಒಂದಾಗಿರುವ ಈ ಕಾಮ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುತ್ತದೆ. ಅಂತಹ ಕಾಮದ ಕೆಟ್ಟತನವನ್ನು, ಅತಿ ಆಸೆಯನ್ನು ಪ್ರತಿವರ್ಷ ಶಿಶಿರ ಮಾಸದ ಹುಣ್ಣಿಮೆಯ ದಿನದಂದು ಕಟ್ಟಿಗೆಯ ರೂಪದಲ್ಲಿ ಸುಟ್ಟು ಹಾಕುವ ಮೂಲಕ ಕಾಮದಹನವನ್ನು ನಾವು ಆಚರಿಸುತ್ತೇವೆ. ಈ ಸಮಯದಲ್ಲಿ ಕೆಟ್ಟ ಕೆಟ್ಟ ಬೈಗುಳಗಳು, ಪೋಲಿ ಮಾತುಗಳನ್ನು ಕೂಡ ಆಡಿ ತೀಟೆ ತೀರಿಸಿಕೊಳ್ಳುವ ಸಂಪ್ರದಾಯ ಇದೆ. ಲಬೋ ಎಂದು ಬಾಯಿಗೆ ಕೈಯಿಟ್ಟು ಬಾಯಿ ಬಡೆದುಕೊಳ್ಳುವ ಆ ಮೂಲಕ ಕಾಮದಹನವನ್ನು ಆಚರಿಸುವ ಪ್ರಕ್ರಿಯೆ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಚಲಿತವಾಗಿದೆ.



ನಾವು ಚಿಕ್ಕವರಿದ್ದಾಗ ನನ್ನ ಅಣ್ಣಂದಿರು ತಮ್ಮದೇ ಒಂದು ತಂಡ ಕಟ್ಟಿಕೊಂಡು ಮನೆ ಮನೆಯಲ್ಲಿ ಕಾಮಣ್ಣನ ಪಟ್ಟಿಯನ್ನು ಸಂಗ್ರಹಿಸಿ ಅದರ ಜೊತೆಗೆ ಉರುವಲುಗಳನ್ನು ಕೂಡ ಮನೆ ಮನೆಗಳಿಂದ ಪಡೆಯುತ್ತಿದ್ದರು. ಅವರೊಂದಿಗೆ ನಾವು ಚಿಕ್ಕ ಹೆಣ್ಣು ಮಕ್ಕಳು ಕೂಡ ಜೊತೆಗೂಡುತ್ತಿದ್ದೆವು. ಇದರ ಜೊತೆಗೆ ಮನೆಯ ಹಿತ್ತಲಿನಲ್ಲಿ ಇರುತ್ತಿದ್ದ ಸಣ್ಣ ಪುಟ್ಟ ಮರದ ನಿರುಪಯುಕ್ತ ಪೀಠೋಪಕರಣಗಳ ತುಂಡುಗಳನ್ನು, ರಟ್ಟಿನ ಡಬ್ಬಿಗಳನ್ನು ಮುತ್ತಿತರ



ಉರುವಲು ಸಾಮಗ್ರಿಗಳನ್ನು ಕದ್ದು ಈ ಕಾಮ ದಹನದ ಕಾರ್ಯಕ್ಕೆ ಬಳಸುತ್ತಿದ್ದೆವು. ಹೀಗೆ ತಂದ ವಸ್ತುಗಳನ್ನು ಕಾಮದಹನಕ್ಕೆ ಸಜ್ಜಾಗಿದ ಅಂಗಳದಲ್ಲಿ ಸೇರಿಸಿ ಅದರ ಮೇಲೆ ತೆಂಗಿನ ಗರಿಗಳನ್ನು ಉದ್ದಕ್ಕೆ ಸೇರಿಸಿ ಮುಚ್ಚಿ ಬಿಡುತ್ತಿದ್ದೆವು. ಹುಣ್ಣಿಮೆಯ ದಿನ ರಾತ್ರಿ ಕಾಮನ ಪೂಜೆಯನ್ನು ಮಕ್ಕಳಲ್ಲಿ ಒಬ್ಬರು ಶಾಸ್ತ್ರೋಕ್ತವಾಗಿ ಮಾಡಿ ತಮಟೆಯ ಸದ್ದಿನ ನಡುವೆ ಕಾಮಣ್ಣನನ್ನು ಸುಡುವ ಮೂಲಕ ಆಚರಿಸುತ್ತಿದ್ದೆವು.

ಮರುದಿನ ಮುಂಜಾನೆ ಈ ಕಾಮನನ್ನು ಸುಟ್ಟ ಕೆಂಡದಿಂದಲೇ ಪ್ರತಿ ಮನೆಯಲ್ಲಿಯೂ ಒಲೆ ಹಚ್ಚಿ ಅಡುಗೆ ಮಾಡುತ್ತಾರೆ ಹಾಗೆ ಒಲೆ ಇಲ್ಲದವರು ಕಾಮಣ್ಣನನ್ನು ಸುಡಲು ಬಳಸಿದ ಕಟ್ಟಿಗೆಯ ಕೆಂಡವನ್ನು ತಂದು ನೀರು ಕಾಯಿಸುವ ಒಲೆಗೆ ಹಾಕಿ ನೀರು ಕಾಯಿಸಿ ಆ ನೀರಿನಲ್ಲಿ ಸ್ನಾನ ಮಾಡುತ್ತಾರೆ. ಈ ಕೆಲಸವನ್ನು ಮನೆಯ ಅಮ್ಮ, ಅಜ್ಜಿಯಂದಿರು ಮಾಡಿದರೆ... ಅಪ್ಪ ಹಿಂದಿನ ದಿನವೇ ಅಂಗಡಿಯಿಂದ ತಂದ ಬೇರೆ ಬೇರೆ ಬಣ್ಣಗಳನ್ನು ಬೇರೆ ಬೇರೆಯಾಗಿಯೇ ಬಕೀಟುಗಳಲ್ಲಿ ಕಲಸಿ ವಿವಿಧ ಬಾಟಲಿಗಳಿಗೆ ತುಂಬಿ ಕೊಡುತ್ತಿದ್ದರು. ತುಸು ಹಳೆಯದಾದ ಬಟ್ಟೆಗಳನ್ನು ತೊಟ್ಟ ಮಕ್ಕಳು ಬಣ್ಣದ ಬಾಟಲಿಗಳನ್ನು, ಪಿಚಕಾರಿಗಳನ್ನು ಹಿಡಿದುಕೊಂಡು ಬೇರೆಯವರ ಮೇಲೆ ಬಣ್ಣವನ್ನು ಎರಚುತ್ತಾ ಖುಷಿಯಿಂದ ಕೇಕೆ ಹಾಕುತ್ತಾ ಮನೆಯ ಸುತ್ತ ಬೇರೆ ಬೇರೆ ಓಣಿಗಳಲ್ಲಿ ಓಡಾಡಿ ಬಣ್ಣ ಎರಚಿ ಸಂಭ್ರಮಿಸುತಿದ್ದರು. ಇನ್ನು ತುಸು ದೊಡ್ಡವರು ಬಣ್ಣದ ಒಣ ಪುಡಿಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಸ್ನೇಹಿತರಿಗೆ ಮತ್ತು ಪರಿಚಿತರಿಗೆ ಬಣ್ಣವನ್ನು ಹಚ್ಚಿ ಖುಷಿಪಡುತ್ತಿದ್ದರು ಕೆಲವೊಮ್ಮೆ ಜಗಳವಾಡಿ ಮಾತು ಬಿಟ್ಟ ಸ್ನೇಹಿತರು ಕೂಡ ಹೋಳಿ ಹಬ್ಬದ ಈ ಸಮಯದಲ್ಲಿ ಒಬ್ಬರಿಗೊಬ್ಬರು ಬಣ್ಣ ಹಚ್ಚುವ ಮೂಲಕ ಮತ್ತೆ ಒಂದಾಗುತ್ತಿದ್ದರು. ಮಧ್ಯಾಹ್ನದವರಿಗೂ ಬಣ್ಣದ ಆಟವನ್ನು ಆಡಿ ಮನೆಗೆ ಬರುತ್ತಿದ್ದ ಮಕ್ಕಳಿಗೆ ಎಣ್ಣೆ ಹಚ್ಚಿ ಬಣ್ಣ ಹೋಗುವಂತೆ ತಿಕ್ಕಿ ಸ್ನಾನ ಮಾಡಲು ಹೇಳಿದರೆ ದೊಡ್ಡ ಮಕ್ಕಳು ಹತ್ತಿರದ ಹೊಳೆ ಹಳ್ಳಗಳಿಗೆ ಬಟ್ಟೆ ತೆಗೆದುಕೊಂಡು ಸ್ನಾನಕ್ಕೆ ಹೋಗುತ್ತಾರೆ. ಹೊಯ್ಯೊಂಡ ಬಾಯಿಗೆ ಹೋಳಗಿ ತುಪ್ಪ ಎಂಬಂತೆ ತಾಯಂದಿರು ಹೋಳಿಗೆಯನ್ನು ಮಾಡಿ ಮಿಂದು ಬಂದ ಮಕ್ಕಳಿಗೆ ಉಣಬಡಿಸುತ್ತಾರೆ.

ಬದಲಾದ ಇಂದಿನ ಕಾಲಘಟ್ಟದಲ್ಲಿ ಹೋಳಿ ಹುಣ್ಣಿಮೆಯ ಸಂಭ್ರಮ ಮರೆಯಾಗಿದ್ದರೂ ಬಣ್ಣದ ಹಬ್ಬ ತನ್ನ ರಂಗನ್ನು ಉಳಿಸಿಕೊಂಡಿದೆ. ಆಧುನಿಕ ಯುಗದಲ್ಲಿ ಅನೇಕ ರೀತಿಯ ಬಣ್ಣದ ಪಿಚಕಾರಿಗಳು ಬಂದಿದ್ದು ಮಕ್ಕಳು ವಿವಿಧ ರಂಗುಗಳನ್ನು ಪರಸ್ಪರ ಎರಚಿ ಸಂತಸ ಪಡುತ್ತಾರೆ.

ಉತ್ತರ ಭಾರತದಲ್ಲಿ ಹೋಳಿ ಹಬ್ಬವನ್ನು ಹೋಲಿಕಾದಹನ ಮಾಡುವ ಮೂಲಕ ಆಚರಿಸುತ್ತಾರೆ ಅವರ ಪ್ರಕಾರ ರಾಕ್ಷಸ ಹಿರಣ್ಯಕಶಿಪುವಿನ ಮಗ ಪ್ರಹ್ಲಾದನು ಹರಿಯೇ ಸರ್ವೋತ್ತಮ, ಹರಿಯೇ ಜಗದೋದ್ಧಾರಕ ಎಂದು ತನ್ನ ತಂದೆಯ ಆಜನ್ಮ ವೈರಿ ಹರಿಯನ್ನು ಪೂಜಿಸುವುದನ್ನು ಕಂಡು ಕೋಪದಿಂದ ತನ್ನ ಮಗನನ್ನು ಸಾಯಿಸಲು ಹಲವಾರು ಬಾರಿ ಪ್ರಯತ್ನಿಸಿದನು. ಅಂತಹ ಒಂದು ಪ್ರಯತ್ನದ ಅಂಗವಾಗಿ ತನ್ನ ಸೋದರಿ ಹೋಲಿಕಾಳಿಗೆ ವರವಾಗಿ ದೊರೆತ ಸುಡದ ಅಂಗವಸ್ತ್ರವನ್ನು ಧರಿಸಿ ಪ್ರಹ್ಲಾದನನ್ನು ಬೆಂಕಿಯ ಬಾಯಿಯಲ್ಲಿ ದೂಡಲು ಆಕೆಗೆ ಕೇಳಿಕೊಂಡನು. ಅಣ್ಣನ ಮಾತನ್ನು ಮೀರದ ಹೋಲಿಕ ತನ್ನ ಅಂಗವಸ್ತ್ರವನ್ನು ಧರಿಸಿ ಪುಟ್ಟ ಪ್ರಹ್ಲಾದನನ್ನು ಎತ್ತಿಕೊಂಡು ಬೆಂಕಿಯಲ್ಲಿ ಪ್ರವೇಶಿಸಿದಳು. ಆದರೆ ಯಾವ ಮಾಯದಲ್ಲಿಯೋ ಆಕೆಯ ಅಂಗವಸ್ತ್ರವು ಆಕೆಯ ದೇಹದಿಂದ ಬಿದ್ದು ಹೋಗಿ ಆಕೆ ಸಜೀವವಾಗಿ ದಹನಗೊಂಡಳು, ಆದರೆ ಪುಟ್ಟ ಮಗು ಪ್ರಹ್ಲಾದ ಸೋಜಿಗವೆಂಬಂತೆ ಪಾರಾದನು. ಈ ದಿನ ಹೋಲಿಕ ಎಂಬ ಕಾಮನೆಯನ್ನು ಸುಟ್ಟು ಹಾಕುವ ಆಚರಣೆಯನ್ನು ಉತ್ತರ ಭಾರತೀಯರು ಮಾಡುತ್ತಾರೆ. ಹೋಲಿ ಹಬ್ಬ ಉತ್ತರ ಭಾರತೀಯರ ಪಾಲಿಗೆ ಅತಿ ದೊಡ್ಡ ಹಬ್ಬವಾಗಿದ್ದು ಹಾಡು, ಕುಣಿತ, ನೃತ್ಯ ಸಂಗೀತಗಳ ಜೊತೆ ಜೊತೆಗೆ ಭಾಂಗ್ ಎಂಬ ನಶೆಯ ಪೇಯವನ್ನು ಕೂಡ ಅವರು ಸೇವಿಸಿ ಮತ್ತರಾಗುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಬಾಲಿವುಡ್ ನಲ್ಲಿ ಹೋಲಿ ಪಾರ್ಟಿ ಎಂದು ಚಿತ್ರರಂಗದ ಎಲ್ಲರನ್ನೂ ಆಮಂತ್ರಿಸಿ ದೊಡ್ಡ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ.

ಇನ್ನು ನರಸಿಂಹದೇವರ ದೇವಸ್ಥಾನವಿರುವ ಕಡೆಗಳಲ್ಲಿ ಹೋಳಿ ಹಬ್ಬವನ್ನು ಆಚರಿಸುವುದಿಲ್ಲ. ನರಸಿಂಹದೇವರ ದೇವಸ್ಥಾನವಿರುವ ಸುತ್ತಲ ಏಳು ಹಳ್ಳಿಗಳಲ್ಲಿ ಕಾಮದಹನ, ಬಾಯಿ ಬಡಿದುಕೊಳ್ಳುವ, ಕೆಟ್ಟ ಮಾತುಗಳನ್ನು ಹೇಳುವ ಯಾವುದೇ ಆಚರಣೆಗಳು ಇಲ್ಲ. ಜೊತೆಗೆ ಬಣ್ಣದ ಹಬ್ಬವು ಇಲ್ಲ. ಅದೆಷ್ಟೇ ಆಕರ್ಷಣೀಯವಾದರೂ ಬಣ್ಣದ ಈ ಹಬ್ಬವನ್ನು ಈ ಭಾಗಗಳಲ್ಲಿ ಆಚರಿಸುವುದಿಲ್ಲ. ಅಷ್ಟಾಗಿಯೂ ಆಚರಿಸಬೇಕೆಂಬ ಆಸಕ್ತಿಯುಳ್ಳವರು ತಮ್ಮ ಊರನ್ನು ಬಿಟ್ಟು ಬೇರೆ ಊರುಗಳಿಗೆ ಬಣ್ಣದ ಆಟ ಆಡಲು ತೆರಳುತ್ತಾರೆ.

ಇನ್ನು ಕೆಲ ಪ್ರದೇಶಗಳಲ್ಲಿ ಹೋಳಿ ಹುಣ್ಣಿಮೆಯ ದಿನ ಕಾಮ ಮತ್ತು ರತಿದೇವಿಯರನ್ನು ವಿದ್ಯುಕ್ತವಾಗಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ನಾಲ್ಕು ದಿನಗಳ ಕಾಲ ಕಾಮ ರತಿದೇವಿಯರನ್ನು ಪೂಜಿಸಿ 4ನೇ ದಿನ ರಾತ್ರಿ ಕಾಮದಹನವನ್ನು ಮಾಡುತ್ತಾರೆ. ಐದನೆಯ ದಿನ ಬಣ್ಣದ ಹಬ್ಬವನ್ನು ರಂಗ ಪಂಚಮಿ ಎಂದು ಆಚರಿಸುತ್ತಾರೆ.

ಜೀವಂತ ಕಾಮದೇವ ಮತ್ತು ರತಿದೇವಿಯರನ್ನು ಕೂಡ ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ನೋಡಬಹುದು. ಕಣ್ಣು ಪಿಳುಕಿಸದೆ ಯಾವುದೇ ರೀತಿಯ ಚಟುವಟಿಕೆಗಳನ್ನು ಮಾಡದೆ ಅಲಂಕಾರಗೊಂಡ ಕಲಾವಿದರು ಗಂಟೆಗಟ್ಟಲೆ ಒಂದೇ ಭಂಗಿಯಲ್ಲಿ ಕುಳಿತುಕೊಳ್ಳುವುದನ್ನು ನೋಡಬಹುದು. ತಮ್ಮ ಮನೆಯ ಸೀರೆ ವಸ್ತ್ರಗಳನ್ನು ಕಾಮದೇವ ಮತ್ತು ರತಿದೇವಿಯರಿಗೆ ಹಾಕಿ ಸಂತೋಷ ಪಡುವ ಜನರು ಕೂಡ ಇದ್ದಾರೆ. ಇನ್ನು ಕೆಲವರು ತಮ್ಮ ಮನೆಯ ಚಿನ್ನದ ಆಭರಣಗಳನ್ನು ಕೂಡ ಕಾಮದೇವ ಮತ್ತು ರತಿ ದೇವಿಯರಿಗೆ ಅಲಂಕರಿಸಲು ಕೊಡುತ್ತಾರೆ. ಕಾಮದಹನದ ನಂತರ ತಮ್ಮ ವಸ್ತುಗಳನ್ನು ಮರಳಿ ಪಡೆಯುತ್ತಾರೆ. ಮದುವೆಯಾಗದ ಯುವಕ ಯುವತಿಯರು, ಮಕ್ಕಳಾಗದ ದಂಪತಿಗಳು ಕಾಮದೇವ ರತಿದೇವಿಯರಲ್ಲಿ ಪ್ರಾರ್ಥಿಸಿ ಹರಕೆ ಕಟ್ಟಿಕೊಳ್ಳುತ್ತಾರೆ. ಮುಂದೆ ಮದುವೆಯಾದ ನಂತರ, ಮಕ್ಕಳಾದ ನಂತರ ತಮ್ಮ ಹರಕೆಯನ್ನು ತೀರಿಸುತ್ತಾರೆ.

ಹಳೆಯ ಆಚರಣೆಗಳು ಮತ್ತು ಹೊಸ ಸಂಭ್ರಮಗಳ ಸಂಗಮದ ಈ ಹೋಲಿ ಹಬ್ಬ ನಮ್ಮೆಲ್ಲರ ಜೀವನದಲ್ಲಿ ಸುಖ ಸಮೃದ್ಧಿ ನೆಮ್ಮದಿಯನ್ನು ತರಲಿ ಎಂದು ಹಾರೈಸುವ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕೋರಿಕೆ

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ನೀನಿತ್ತ ಉಸಿರು, ನೀ ಕೊಟ್ಟ ಹೆಸರು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಅಪ್ಪ ಕೊಟ್ಟಕ್ಷರ, ಅಣ್ಣ ಕೊಟ್ಟರಿವು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಅಕ್ಕನಿತ್ತಲವು, ತಮ್ಮನೇ ಬಲವು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಸಹೋದರಿಯರ ಅಕ್ಕರವೂ, ಹಾರೈಕೆಯು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಗೆಳೆಯ ಬಿತ್ ಕನಸುಗಳ ಸುಮವು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಬೇಡದೆ ಅರಿತು ನೀಡುವ ಕಾಮಧೇನು
ನೀನು

ಏನ ಬೇಡಲಿ ತಾಯಿ ನಿನ್ನ ಬಳಿ ನಾನು
ಸಾಮೀಪ್ಯ ವೆಂದು ತೊರೆಯದಿರು,
ಕೋರುವೆ ನಾನು.

– ಮಮ್ತಾಜ್ ಬೇಗಂ ಕೆ. ನೀಲಗುಂದ.
ಹರಪನಹಳ್ಳಿ.

ಜಲ್ಲಿ, ಮರಳು, ಎಂ.ಸ್ಯಾಂಡ್ ಪರದೆ ಇಲ್ಲದೇ ವಾಹನಗಳಲ್ಲಿ ಸಾಗಣೆ, ಷರತ್ತು ಉಲ್ಲಂಘಿಸಿದ ವಾಹನಗಳ ಮೇಲೆ ಕ್ರಮ ಕೈಗೊಳ್ಳಲು ಉಪ ಲೋಕಾಯುಕ್ತರಿಂದ ಸೂಚನೆ

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಮೊಬೈಲ್ ಪರಿಶೀಲನೆ ನಿಯಮಬಾಹಿರವಾಗಿ ಹಣ ವರ್ಗಾವಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಮರಳು, ಕಲ್ಲು, ಅದಿರು ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗುತ್ತದೆ. ಆದರೆ ವಾಹನಗಳಲ್ಲಿ ಸಾಗಣೆ ಮಾಡುವಾಗ ಮೇಲೆ ಹೊದಿಕೆ ಹಾಕದಿರುವುದರಿಂದ ಇತರೆ ವಾಹನ ಸವಾರರಿಗೆ ತೊಂದರೆಯಾಗುವ ಜೊತೆಗೆ ರಸ್ತೆಗಳಲ್ಲಿ ದೂಳಾಗುವುದನ್ನು ತಡೆಗಟ್ಟಲು ಹೊದಿಕೆ ಅಳವಡಿಸದ ವಾಹನಗಳ ಮೇಲೆ ಅದಿರು ಸಾಗಣೆ ನಿಯಮಗಳನ್ವಯ ದಂಡ ವಿಧಿಸಬೇಕೆಂದು ಉಪಲೋಕಾ ಯುಕ್ತರಾದ ಬಿ.ವೀರಪ್ಪ ಸೂಚನೆ ನೀಡಿದರು.

ಅವರು ಶುಕ್ರವಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಅನಿರೀಕ್ಷಿತ ಭೇಟಿ ನೀಡಿದಾಗ ಅದಿರು ಸಾಗಿಸುವ ಅದರಲ್ಲಿಯು ಎಂ.ಸ್ಯಾಂಡ್ ಮತ್ತು ಸಣ್ಣ ಜಲ್ಲಿ ಸಾಗಣೆ ಮಾಡುವ ವಾಹನಗಳು ಹೊದಿಕೆಯಿಂದ ಮುಚ್ಚದಿರುವುದರಿಂದ ರಸ್ತೆಯಲ್ಲಾ ದೂಳಾಗಿರುತ್ತದೆ ಎಂದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳಿಂದ ಇದಕ್ಕೆ ಯಾವುದೇ ಉತ್ತರ ಬಾರದಿರುವಾಗ ಅದಿರು ಗಣಿಗಾರಿಕೆ ಷರತ್ತುಗಳ ಪರಿಶೀಲನೆ ಮಾಡಿದಾಗ ಸಾಗಣೆ ವೇಳೆ ಸೋರಿಕೆಯಾಗದಂತೆ ಹೊದಕೆ ಕಡ್ಡಾಯವಾಗಿ ಅಳವಡಿಸಬೇಕೆಂದು ಷರತ್ತಿದ್ದರೂ ಅನುಷ್ಟಾನ ಮಾಡಲಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಜಿಲ್ಲೆಯಲ್ಲಿ ಎರಡು ಐರನ್ ಓರ್ ಕಂಪನಿಗಳಿದ್ದು 70 ಕ್ರಷರ್, 112 ಕ್ವಾರಿಗಳಿವೆ ಎಂದು ಮಾಹಿತಿ ನೀಡಿದರು. ಅಕ್ರಮ ಗಣಿಗಾರಿಕೆ ತಡೆಗೆ ಮತ್ತು ರಾಜಧನ ಸಂಗ್ರಹ ಮಾಡಲು ಕೈಗೊಳ್ಳುವ ಕ್ರಮಗಳ ಮಾಹಿತಿ ಕೇಳಿದಾಗ ಸರಿಯಾದ ದಾಖಲೆ ಮತ್ತು ಕಡತ ನಿರ್ವಹಣೆ ಮಾಡಿದ್ದನ್ನು ಹಾಜರುಪಡಿಸಲು ವಿಫಲರಾದರು. ಇದನ್ನು ಗಂಭೀರವಾಗಿ ಪರಿಗಣಿಸಿ ಲೋಕಾಯುಕ್ತ ಪ್ರಕರಣ ದಾಖಲಿಸಲು ಸೂಚನೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದಿ ಇಲಾಖೆಗೆ ಭೇಟಿ; ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಉಪಲೋಕಾಯುಕ್ತರು ಭೇಟಿ ನೀಡಿ ಹಾಜರಾತಿ ಪರಿಶೀಲನೆ ನಡೆಸಿದರು. ಈ ವೇಳೆ ನಿರೂಪಣಾಧಿಕಾರಿ ಅನ್ಯ ಕರ್ತವ್ಯದ ನಿಮಿತ್ತ ಹೋಗಿದ್ದಾರೆ ಎಂದಾಗ ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿಗಳನ್ನು ನೀಡಲಿಲ್ಲ. ಮತ್ತು ಕಚೇರಿ ಮ್ಯಾನೇಜರ್ ಅವರ ಮೊಬೈಲ್ ಪರಿಶೀಲನೆ ನಡೆಸಿದಾಗ ಯುಪಿಐ ಡಿಲಿಟ್ ಮಾಡಿರುವುದು ಕಂಡು ಬಂದಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಮೊಬೈಲ್ ಅನ್ನು ಪರಿಶೀಲನೆ ನಡೆಸಿದ ಅವರು ಐವತ್ತು, ಇಪ್ಪತ್ತು ಸಾವಿರ ಕಳುಹಿಸಿರುವುದು ಮತ್ತು ಪಡೆದಿರುವುದು ಗಮನಿಸಲಾಯಿತು. ಇದಕ್ಕೆ ಉಪಲೋಕಾಯುಕ್ತರು ಪ್ರಕರಣ ದಾಖಲಿಸಿ ಪರಿಶೀಲಿಸಲು ಲೋಕಾಯುಕ್ತ ಅಧಿಕಾರಿಗಳಿಗೆ ತಿಳಿಸಿದರು.

## ಮೈಕ್ರೋ ನ್ಯೂಸ್

### ಬಲಿಜ ಸಮುದಾಯ ದವರನ್ನು 2ಎ ಮೀಸಲಿಗೆ ಸೇರಿಸಲು ಒತ್ತಾಯ

ಹಂಪಿ ಟೈಮ್ಸ್ ಕಂಪ್ಲಿ

ರಾಜ್ಯದ ಬಲಿಜ ಸಮುದಾಯದವರನ್ನು ಉದ್ಯೋಗಕ್ಕಾಗಿ 2ಎ ಮೀಸಲಿಗೆ ಸೇರ್ಪಡಿಸುವಲ್ಲಿ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಇಲ್ಲಿನ ಬಲಿಜ ಸಂಘದ ನಗರ ಉಪಾಧ್ಯಕ್ಷ ಆರ್.ತಿರುಮಲದೇವರಾಯ ಒತ್ತಾಯಿಸಿದರು.

ಇಲ್ಲಿನ ತಹಸೀಲ್ ಸಭಾಂಗಣದಲ್ಲಿ ಶುಕ್ರವಾರ ತಾಲೂಕು ಆಡಳಿತ ಹಮ್ಮಿಕೊಂಡಿದ್ದ ಯೋಗಿ ನಾರೇಯಣ ಯತೀಂದ್ರರ 299ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ನಾನಾ ಕ್ಷೇತ್ರಗಳಲ್ಲಿ ಬಲಿಜರು ಹಿಂದುಳಿದ್ದು ಎಲ್ಲಾ ಸೌಲಭ್ಯಗಳನ್ನು 2ಎ ಮೀಸಲಿನಲ್ಲಿ ಒದಗಿಸಬೇಕು. ಪಟ್ಟಣದ ಬಲಿಜ ಸಮಾಜದ ರುದ್ರಭೂಮಿಗಾಗಿ ತಾಲೂಕು ಆಡಳಿತ ಭೂಮಿ ಒದಗಿಸಬೇಕು. ಪಟ್ಟಣದ ರಸ್ತೆ, ವೃತ್ತಗಳಿಗೆ ಯೋಗಿ ನಾರೇಯಣ ಯತೀಂದ್ರರ ಹೆಸರನ್ನು ಇಡುವ ಮೂಲಕ ಅವರ ತತ್ವ ಆದರ್ಶಗಳನ್ನು ಜನತೆಯಲ್ಲಿ ಪ್ರೇರೇಪಿಸಬೇಕು ಎಂದು ಒತ್ತಾಯಿಸಿದರು.

ತಹಸೀಲ್ದಾರ್ ಎಸ್.ಶಿವರಾಜ ಮಾತನಾಡಿ, ಯೋಗಿ ನಾರೇಯಣ ಯತೀಂದ್ರರ ತತ್ವ ಆದರ್ಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು. ತಾತಯ್ಯನವರ ಪರಿಸರ ಪ್ರಜ್ಞೆ, ಸಮಗ್ರತೆ, ಭಾವೈಕ್ಯತೆ, ಜಾತ್ಯಾತೀತತೆ ಮೊದಲಾದ ಮಾನವೀಯ ಗುಣಗಳು ಆದರ್ಶವಾಗಿದೆ ಎಂದರು.

ಬಲಿಜ ಮಹಿಳಾ ಸಂಘದ ನಗರ ಅಧ್ಯಕ್ಷೆ ಶಾರದಮ್ಮ ಶ್ರೀನಿವಾಸ್, ಪದಾಧಿಕಾರಿಗಳಾದ ರೂಪಕಲಾ, ಸುನಂದಮ್ಮ, ಆರತಿ ಸಾವಿತ್ರಮ್ಮ, ಪದ್ಮಾವತೆಮ್ಮ, ಸುನಂದಮ್ಮ, ಇಂಗಳಗಿ ನಾರಾಯಣ, ಬಿ.ಗೋಪಾಲಪ್ಪ, ಹಾದಿಮನಿ ಕಾಳಿಂಗವರ್ಧನ, ಡಿ.ಶ್ರೀನಿವಾಸ್, ಕೆ.ಶಿವಕುಮಾರ್, ಕೆ.ಅನಿಲ್, ತಾಲೂಕು ಅಧ್ಯಕ್ಷ ಬಿ.ನಾಗಭೂಷಣ, ಪದಾಧಿಕಾರಿಗಳಾದ ಎಸ್.ಪ್ರಕಾಶ, ವಿಜಯಕುಮಾರ್, ವಿ.ಕಾರ್ತೀಕ್ ಸೇರಿ ಬಲಿಜ ಸಮುದಾಯದವರು, ನಾನಾ ಕಚೇರಿಗಳ ಸಿಬ್ಬಂದಿ ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

ಕಾಲಜ್ಞಾನಿ ಯೋಗಿನಾರೇಯಣ ಕೈವಾರ ತಾತಯ್ಯನವರ

# ಆದರ್ಶ ಗುಣ ಅಳವಡಿಸಿಕೊಳ್ಳಿ

ಜಯಂತ್ಯೋತ್ಸವದಲ್ಲಿ ಮೇಯರ್ ಮುಲ್ಲಂಗಿ ನಂದೀಶ್ ಕರೆ



■ ಹಂಪಿ ಟೈಮ್ಸ್ ಬಳ್ಳಾರಿ

ವಿಶ್ವಕ್ಕೆ ಉತ್ತಮ ಸಂದೇಶ ಸಾರಿದ ಶ್ರೀ ಯೋಗಿ ನಾರೇಯಣ ಯತೀಂದ್ರ ಅವರು ಕಾಲಜ್ಞಾನಿಯಾಗಿದ್ದರು. ಅಪಾರ ಜ್ಞಾನ ಹೊಂದಿದ ಅವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ಸಾಗಬೇಕು ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ವಡ್ಡರಬಂಡೆಯ ಬಲಿಜ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಯೋಗಿ ನಾರೇಯಣ ಯತೀಂದ್ರ ಶ್ರೀ ಕೈವಾರ ತಾತಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕೈವಾರ ತಾತಯ್ಯನವರು ಒಂದೇ ಸಮಾಜಕ್ಕೆ ಸೀಮಿತರಾದವರಲ್ಲ, ಜಾತಿ–ಮತಗಳ ಕುಲಗೋತ್ರಗಳ ವರ್ಣಭೇದವನ್ನು ಖಂಡಿಸುತ್ತಾ ದೀನ–ದಲಿತರ–ಶೋಷಿತರ ಉದ್ಧಾರಕ್ಕಾಗಿ ಶ್ರಮಿಸಿದವರು ಎಂದು ತಿಳಿಸಿದರು.

ವಿಶ್ವಮಾನವ ಸಂದೇಶ ಸಾರಿದ ನಾರೇಯಣ ಯತೀಂದ್ರ ಅವರ ಜಯಂತಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ. ಮಹಾನ್ ನಾಯಕರ ಆದರ್ಶ ಗುಣಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಅಲಂ ಭಾಷಾ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಜಾತಿ ಎಲ್ಲೆ ಮೀರಿದವರು ಶರಣರಾಗುತ್ತಾರೆ. ಅಂತಹ ಶರಣರ ಸಾಲಿನಲ್ಲಿ ಯೋಗಿ ನಾರೇಯಣ ಯತಿಂದ್ರ ಕೈವಾರ ತಾತಯ್ಯನವರೂ ಇದ್ದರು ಎಂದು ಹೇಳಿದರು.

ಕೈವಾರ ತಾತಯ್ಯ ಎಂದೇ ಪ್ರಸಿದ್ಧಿಯಾಗಿರುವ ಶ್ರೀ ಯೋಗಿ ನಾರೇಯಣ ಯತಿಂದ್ರ ಅವರು ಪದ್ಯ, ಕೀರ್ತನೆ ಹಾಗೂ ಸ್ತೋತ್ರಗಳ ಮೂಲಕ ಸಾಹಿತ್ಯ ರೂಪದಲ್ಲಿ ಜನತೆಗೆ ತಿಳಿಸಿಕೊಟ್ಟ ಮಹಾನ್ ಯೋಗಿಯಾಗಿದ್ದರು ಎಂದರು.

ಬಳೆ ವ್ಯಾಪಾರಿಯಾಗಿದ್ದ ಕೈವಾರ ತಾತಯ್ಯನವರು, ಲೋಕದ ಸ್ತ್ರೀಯರೆಲ್ಲ ತಾಯಿ ಸಮಾನರೆಂದು ಭಾವಿಸಿ ಹೆಣ್ಣುಮಕ್ಕಳಿಗೆ, ಸುಮಂಗಲಿಯರಿಗೆಲ್ಲ ಶುದ್ಧಭಾವದಿಂದ ಬಳೆತೊಡಿಸುತ್ತಿದ್ದರು. ಅವರು ಕೊಟ್ಟ ಕಾಸನ್ನಷ್ಟೇ ಪಡೆಯುತಿದ್ದರು ಎಂದರು.

ಪ್ರಪಂಚದಲ್ಲಿಯೇ ಮುಂದೊಂದು ದಿನ ನಡೆಯಬಹುದಾದ ಪಾಪ ಕೃತ್ಯಗಳ ಪ್ರಾಬಲ್ಯ, ಸಂಪತ್ತಿನ ವಿನಾಶ, ಘೋರ ವೈಪರಿತ್ಯಗಳು, ಭ್ರಷ್ಟಾಚಾರ, ದೌರ್ಜನ್ಯ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ನಡೆಯುವ ಅನ್ಯಾಯದ ಘಟನೆಗಳನ್ನು ಶ್ರೀ ಯೋಗಿ ನಾರೇಯಣ ಯತೀಂದ್ರ ಅವರು ಕಾಲಜ್ಞಾನದಲ್ಲಿ ತಿಳಿಸಿದ್ದಾರೆ. ಅನೇಕ ಪವಾಡಗಳನ್ನು ಮಾಡಿದ್ದಾರೆ ಎಂದು ಸ್ಮರಿಸಿದರು.

ಪ್ರಸ್ತುತದಲ್ಲಿ ಯುವ ಪೀಳಿಗೆಯು ಮೊಬೈಲ್ ವ್ಯಸನಕ್ಕೆ ದಾಸರಾಗಿದ್ದಾರೆ. ಹಾಗಿದ್ದಾಗ ಶರಣರ, ದಾಸರ ಪವಾಡ ಕಾರ್ಯಗಳನ್ನು ಅರಿಯುವುದಾದರೂ ಹೇಗೆ ಎಂದು ವಿಷಾದ ವ್ಯಕ್ತಪಡಿಸಿದ ಅವರು, ಶರಣರ ಕಾಯ ಕಲ್ಪಗಳ ಬಗ್ಗೆ ಮುಂದಿನ ಪೀಳಿಗೆಗೆ ಮಾಹಿತಿ ತಿಳಿಸುವ ಕಾರ್ಯವಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಲಕ್ಷ್ಮಿ ಪವನ್ ಕುಮಾರ್ ತಂಡದಿಂದ ಭಕ್ತಿ ಸಂಗೀತ ಗಾಯನಗಳನ್ನು ಪ್ರಸ್ತುತಪಡಿಸಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

*ಅದ್ದೂರಿ ಮೆರವಣಿಗೆ:*

ಯೋಗಿ ನಾರೇಯಣ ಯತೀಂದ್ರ ಶ್ರೀ ಕೈವಾರ ತಾತಯ್ಯ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಮೆರವಣಿಗೆಗೆ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಚಾಲನೆ ನೀಡಿದರು.

ಮೆರವಣಿಗೆಯು ಬಲಿಜ ಭವನದಿಂದ ಆರಂಭವಾಗಿ ರಾಘವೇಂದ್ರ ಚಿತ್ರಮಂದಿರ–ಇಂದಿರಾ ವೃತ್ತ–ಗಡಿಗಿ ಚೆನ್ನಪ್ಪ ವೃತ್ತ–ಮೀನಾಕ್ಷಿ ವೃತ್ತದ ಮೂಲಕ ಮರಳಿ ಬಲಿಜ ಭವನದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಬಲಿಜ ಸಂಘದ ಜಿಲ್ಲಾಧ್ಯಕ್ಷ ಎಸ್.ಮುರಳಿಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮಾಜದ ಮುಖಂಡರು, ಗಣ್ಯರು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

## ಮಹಾನ್ ಕಾಲಜ್ಞಾನಿ ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ)-ಜಯಂತಿ ಸರಳ ಆಚರಣೆ

■ ಹಂಪಿ ಟೈಮ್ಸ್ ಕೊಟ್ಟೂರು

ಕೊಟ್ಟೂರು ತಾಲೂಕು ಕಛೇರಿ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶುಕ್ರವಾರ ಮಹಾನ್ ಕಾಲಜ್ಞಾನಿ ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ಇವರ ಜಯಂತಿಯನ್ನು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ವಂದಿಸುವುದರೊಂದಿಗೆ ಸರಳವಾಗಿ ಆಚರಿಸಲಾಯಿತು.

ಈ ವೇಳೆ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರು ತಹಶೀಲ್ದಾರರು ಅಮರೇಶ್ ಜಿ ಕೆ ಹಾಗೂ ತಹಶೀಲ್ದಾರ್ ಗ್ರೇಡ್–2 ಎಂ ಪ್ರತಿಭಾ, ತಾಲೂಕು ಬಲಿಜ ಸಮಾಜದ ಅಧ್ಯಕ್ಷ ಪಿ.ಹರೀಶ, ಶಿರಸ್ತೇದಾರರಾದ ಎಸ್ ರೇಖಾ, ಉಪತಹಶೀಲ್ದಾರ್ ಅನ್ನದಾನೇಶ ಬಿ ಪತ್ತಾರ, ಕಂದಾಯ ನಿರೀಕ್ಷಕರು ಹಾಲಸ್ವಾಮಿ, ಗ್ರಾಮ ಆಡಳಿತ ಅಧಿಕಾರಿ ಹರೀಶ್, ಸುಧಾ ಜೈನರ್, ಸಿಬ್ಬಂದಿಯಾದ ಮಂಜುನಾಥ, ಹನಮಂತ ಸಿ ಮ ಗುರುಬಸವರಾಜ ಹಾಗೂ ಇತರೆ ಸಿಬ್ಬಂದಿಯವರು ಹಾಜರಿದ್ದರು.

ತಾಲೂಕು ಬಲಿಜ ಸಮಾಜದ ಮುಖಂಡರು ಟಿ ಬಾಬಯ್ಯ, ಟಿ ಕೊಟ್ರೇಶಿ, ಕೆ ಗೋಪಾಲನಾಯ್ಡು, ಪಿ ಕೆ. ತಿಮ್ಮಣ್ಣ, ಕಿರಣ್ ಕುಮಾರ್, ಬಿ ಮಂಜುನಾಥ ಆಹಾರ ನಿರೀಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಕೊಟ್ಟೂರು ಎಪಿಎಂಸಿಯಲ್ಲಿ ಸರ್ಕಾರದ ಬೆಂಬಲ ಬೆಲೆಯಡಿ ರಾಗಿ ಖರೀದಿ



■ ಹಂಪಿ ಟೈಮ್ಸ್ ಕೊಟ್ಟೂರು

ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ಕೊಟ್ಟೂರು ಪಟ್ಟಣದ ಎಪಿಎಂಸಿ ಪ್ರಾಂಗಣದಲ್ಲಿ ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಿ ಮಾರಾಟ ಮಾಡಿದರು.

> ರಾಗಿ ನೋಂದಣಿ ಮಾಡಿಸಿದ ರೈತರು ಕ್ರಮಸಂಖ್ಯೆಗನುಗುಣವಾಗಿ ನಿಗದಿ ಪಡಿಸಿದ ಆಯಾ ದಿನಾಂಕದಂದು ರಾಗಿ ತರಲು ಎಪಿಎಂಸಿ ಕಾರ್ಯದರ್ಶಿ ಸೂಚನೆ.

ರೈತರು ಮಾರಾಟಕ್ಕೆ ತಂದ ರಾಗಿಯನ್ನು ಖರೀಧಿ ಕೇಂದ್ರದಲ್ಲಿ ಜೆರಡಿಗೆ ಹಾಕಿ ಸ್ವಚ್ಚಗೊಳಿಸಿ,ಗುಣಮಟ್ಟ ಪರಿಶೀಲಿಸಿ ನಂತರ ರಾಗಿಯನ್ನು ತೂಕ ಮಾಡಿಕೊಂಡರು. ಈ ವೇಳೆ ಸ್ಥಳದಲ್ಲಿದ್ದ ಎಪಿಎಂಸಿ ಕಾರ್ಯದರ್ಶಿ ವೀರಣ್ಣ ಅವರು ಪತ್ರಿಕೆಯೊಂದಿಗೆ ಮಾತನಾಡಿ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂ.ಗಳನ್ನು ಘೋಷಿಸಿದೆ. ಖರೀದಿ ಕೇಂದ್ರಕ್ಕೆ ರೈತರು ಸ್ವಚ್ಚತೆ ಹಾಗೂ ಗುಣಮಟ್ಟದ ರಾಗಿ ತಂದು ಸರ್ಕಾರದ ಬೆಂಬಲ ಬೆಲೆಯ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದರು. ರಾಗಿ ನೊಂದಣಿ ಮಾಡಿಸಿದ ರೈತರು ಕ್ರಮ ಸಂಖ್ಯೆಗೆ ಅನುಗುಣವಾಗಿ ನಿಗದಿ ಪಡಿಸಿದ ಆಯಾ ದಿನಾಂಕದಂದು ತಮ್ಮ ರಾಗಿಯನ್ನು ಖರೀದಿ ಕೇಂದ್ರಕ್ಕೆ ತರಬೇಕು ಇದರಿಂದ ರೈತರು ಇಲ್ಲಿ ಕಾಯುವುದು ಹಾಗೂ ಖರೀದಿಸಿದನ್ನು ಸರಬರಾಜು ಮಾಡಲು ಅನುಕೂಲವಾಗುತ್ತೆ ಎಂದು ತಿಳಿಸಿದರು

## ಪ್ರವಾಸಿ ಮಾಹಿತಿ ಕೇಂದ್ರ ಸ್ಥಾಪನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳ ಬೇಟಿ ನೀಡುವ ಪ್ರವಾಸಿಗರಿಗೆ ಮಾಹಿತಿ, ಸುರಕ್ಷತೆ ಹಾಗೂ ಭದ್ರತೆ ಹಿತದೃಷ್ಟಿಯಿಂದ ಪ್ರವಾಸಿ ಮಾಹಿತಿ ಕೇಂದ್ರ (Information Center) ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯು ಐತಿಹಾಸಿಕ ಪ್ರೇಕ್ಷಣಿಯ ಸ್ಥಳಗಳನ್ನು ಹೊಂದಿರುವ ಜಿಲ್ಲೆಯಾಗಿದ್ದು, ದೇಶ ಹಾಗೂ ವಿದೇಶದಿಂದ ಹಲವಾರು ಪ್ರವಾಸಿಗರು ಭೇಟಿ ನೀಡುತ್ತಿರುತ್ತಾರೆ. ಈ ಪ್ರವಾಸಕ್ಕೆ ಆಗಮಿಸುವ ಪ್ರವಾಸಿಗರಿಗೆ ಮಾಹಿತಿ, ಸುರಕ್ಷತೆ, ಜಾಗೃತಿ ಕಲ್ಪಿಸುವ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಒಂದು ಪ್ರವಾಸಿ ಮಾಹಿತಿ ಕೇಂದ್ರವನ್ನು (ಸಹಾಯವಾಣಿ) ಮಾರ್ಚ್ 11 ರಿಂದ ಆರಂಭಿಸಲಾಗಿದೆ. ಈ ಮಾಹಿತಿ ಕೇಂದ್ರದಲ್ಲಿ ಆರೋಗ್ಯ, ಪೊಲೀಸ್, ಅಗ್ನಿಶಾಮಕ, ಅರಣ್ಯ, ಅಬಕಾರಿ, ಪ್ರವಾಸೋದ್ಯಮ, ಪುರಾತತ್ವ ಇಲಾಖೆಯ ಅಧಿಕಾರಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ.

ಕೊಪ್ಪಳ ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ಆರೋಗ್ಯ, ಪ್ರವಾಸಿ ತಾಣ, ಅಪರಾದ, ವಿಪತ್ತುಗಳಂತಹ ಇತರ ಅವಶ್ಯಕ ಮತ್ತು ತುರ್ತು ಸಂದರ್ಭದಲ್ಲಿ ನಿಖರವಾದ ಮತ್ತು ಸೂಕ್ತ ಮಾಹಿತಿಯನ್ನು ಒದಗಿಸುವ ಹಿತದೃಷ್ಟಿಯಿಂದ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಈ ಅಧಿಕಾರಿ/ಸಿಬ್ಬಂದಿ ವರ್ಗದವರು ಪ್ರತಿದಿನ ಬೆಳಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಸಹಾಯವಾಣಿ ಕೇಂದ್ರದಲ್ಲಿ ಕರ್ತವ್ಯವನ್ನು ನಿರ್ವಹಿಸಲಿದ್ದು, ಜಿಲ್ಲೆಗೆ ಆಗಮಿಸುವ ಪ್ರವಾಸಿಗರು ತಮಗೆ ಬೇಕಾದ ಅಗತ್ಯ ಸಲಹೆ ಹಾಗೂ ಮಾಹಿತಿಯನ್ನು ಪಡೆಯಲು ಈ ಸಹಾಯವಾಣಿ ಸಂಖ್ಯೆ : 08539–225311 ಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

## ಮುನಿರಾಬಾದ್: ಇಂದು ವಿದ್ಯುತ್ ಗ್ರಾಹಕರ ಸಂವಾದ ಸಭೆ

■ ಹಂಪಿ ಟೈಮ್ಸ್ ಕೊಪ್ಪಳ

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಮುನಿರಾಬಾದ್ ಕಚೇರಿ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಮಾರ್ಚ್ 15 ರಂದು ಬೆಳಿಗ್ಗೆ 11 ಗಂಟೆಗೆ ಮುನಿರಾಬಾದ್ ಜೆಸ್ಕಾಂ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಸರ್ಕಾರದ ಆದೇಶದನ್ವಯ ಹಾಗೂ ಮೇಲಾಧಿಕಾರಿಗಳ ನಿರ್ದೇಶನದನ್ವಯ ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ಪ್ರತಿ ತಿಂಗಳಿನ 3ನೇ ಶನಿವಾರದಂದು ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಅದರಂತೆ ಮಾ.15 ರಂದು ಮುನಿರಾಬಾದ್ ಜೆಸ್ಕಾಂ ಉಪವಿಭಾಗದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳಾದ ಮುನಿರಾಬಾದ್ , ಹುಲಿಗಿ, ಹಿಟ್ನಾಳ, ಅಗಳಕೇರಾ, ಶಿವಪುರ, ಗಿಣಿಗೇರಾ, ಹಿರೇಬಗನಾಳ, ಕುಣಿಕೇರಾ, ಕಲ್‌ತಾವರಗೇರಾ, ಬಂಡಿಹರ್ಲಾಪುರ, ಬೂದುಗುಂಪಾ, ಗುಳದಳ್ಳಿ, ಬೇವಿನಹಳ್ಳಿ, ಇಂದರಗಿ, ಹೊಸಳ್ಳಿ ಗ್ರಾಮ ಪಂಚಾಯತಿಗಳ ಎಲ್ಲಾ ವಿದ್ಯುತ್ ಗ್ರಾಹಕರು ಈ ಸಭೆಗೆ ಹಾಜರಾಗಿ, ಯಶಸ್ವಿಗೊಳಿಸಬೇಕು ಎಂದು ಜೆಸ್ಕಾಂ ಮುನಿರಾಬಾದ್ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ಮಾ. 20 ರಿಂದ ಏಪ್ರಿಲ್ 3ರ ವರೆಗೆ ಪಂಚಾಚಾರ್ಯರ ಯುಗಮನೋತ್ಸವ



**ಹಂಪಿ ಟೈಮ್ಸ್ ಕೊಟ್ಟೂರು**

ಮಾರ್ಚ್–20 ರಿಂದ ಏಪ್ರಿಲ್ 3 ರ ತನಕ 15 ದಿನಗಳ ಕಾಲ ಪಟ್ಟಣದ ಡೋಣೂರು ಚಾನು ಕೋಟಿ ಮಠದ ಪೀಠಾಧ್ಯಕ್ಷರು ಡಾ.ಸಿದ್ದಲಿಂಗ ಶಿವಾಚಾರ್ಯರ ಷಷ್ಠಾಬ್ದಿ ಹಾಗೂ ಪಂಚಾಚಾರ್ಯರ ಯುಗಮನೋತ್ಸವು ಅದ್ದೂರಿಯಾಗಿ ನಡೆಯಲಿದೆ.

ಈ ನಿಮಿತ್ತ ಶುಕ್ರವಾರ ಡೋಣೂರು ಚಾನುಕೋಟಿ ಮಠದ ಪೀಠಾಧ್ಯಕ್ಷರು ಡಾ.ಸಿದ್ದಲಿಂಗ ಶಿವಚಾರ್ಯಸ್ವಾಮಿಗಳು, ಕೂಡ್ಲಿಗಿ ಹಿರೆ ಮಠದ ಪ್ರಶಾಂತ ಸಾಗರ ಸ್ವಾಮಿಗಳು ಹಾಗೂ ಬೆಣ್ಣಿಹಳ್ಳಿ ಶಿವಚಾರ್ಯಸ್ವಾಮಿಗಳು ಸೇರಿದಂತೆ ಇತರೆ ಶಿವಾಚಾರ್ಯರು , ಕೊಟ್ಟೂರಿನ ದೈವಸ್ಥರ ತಂಡ ಒಟ್ಟು ಗೂಡಿ ತಾಲೂಕಿನ ಅಂಬಳಿ, ಕೋಗಳಿ, ಕೆ.ಕೋಡಿಹಳ್ಳಿ ಹಾಗೂ ಅಲಬೂರು ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮದ ಜನರಿಗೆ ಆಹ್ವಾನ ಪತ್ತವನ್ನು ಕೊಟ್ಟು ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕೋರಿದರು.

ಕಾರ್ಯಕ್ರಮದ ರೂಪರೇಷಗಳು ಕಳೆದ ಒಂದು ವಾರದಿಂದ ಚುರುಕು ಪಡೆದುಕೊಂಡಿದ್ದು, ದೈವಸ್ಥರೊಂದಿಗೆ ಚಾನುಕೋಟಿಮಠದ ಶ್ರೀಗಳು ಹಾಗೂ ವಿವಿಧ ಶಿವಚಾರ್ಯರು ಸೇರಿ ತಾಲೂಕಿನ ಎಲ್ಲಾ ಹಳ್ಳಿಗಳಲ್ಲಿ ಸಂಚರಿಸಿ ಗ್ರಾಮದ ಸರ್ವರನ್ನು ಸ್ವಾಗತಿಸಿರುವರು.

ಮಾರ್ಚ್–20 ರಿಂದ ಏಪ್ರಿಲ್– 3 ರ ವರೆಗೆ ಕೊಟ್ಟೂರಿನಲ್ಲಿ ಧಾರ್ಮಿಕ ಪೂಜಾ ಕೈಂಕಾರ್ಯಗಳು, ಸಭೆಗಳು ಹಾಗೂ ಜಗದ್ಗುರುಗಳ ಧರ್ಮಬೋದನೆ ಸೇರಿದಂತೆ ಪಟ್ಟಣದೆಲ್ಲೆಡೆ ಹಬ್ಬದ ವಾತಾವರಣ ಮನೆ ಮಾಡಲಿದ್ದು ಸಕಲ ಭಕ್ತಾದಿಗಳು ಈ ಕಾರ್ಯಕ್ರಮಕ್ಕೆ ತಪ್ಪದೆ ಆಗಮಿಸಿ ಧರ್ಮಬೋದನೆ ಹಾಲಿಸಿ,ವೀಕ್ಷಿಸಿ ಮನ ಮತ್ತು ಮನಸ್ಸನ್ನು ಶುದ್ಧಿಗೊಳಿಸಿಕೊಳ್ಳಬೇಕಿದೆ.

# ಸರ್ಕಾರಿ ವೈದ್ಯರ ನಿರ್ಲಕ್ಷ್ಯ ಸಲ್ಲದು ಖಾಸಗಿ ಔಷಧಿ ಶಿಫಾರಸ್ಸು ಶಿಕ್ಷಾರ್ಹ

### ಬಡಜನರ ಜೀವದ ಜೊತೆ ಚೆಲ್ಲಾಟವಾಡದಿರಿ | ಔಷಧಿ ಕೊರತೆ ಇದ್ದರೇ ಖರೀದಿಸಿ ವಿತರಿಸಿ ಉಪಲೋಕಾಯುಕ್ತ ಬಿ.ವೀರಪ್ಪ ವೈದ್ಯರಿಗೆ ಖಡಕ್ ಸೂಚನೆ | ಕುಡಿದು ಬಂದ್ರೆ ಕೇಸ್ ದಾಖಲಿಸಿ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರಿ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಔಷಧಿಗಳನ್ನು ಹೊರಗಡೆ ಖರೀದಿಸಲು ಶಿಫಾರಸ್ಸು ಮಾಡಿದರೇ ಕಡ್ಡಾಯವಾಗಿ ಪ್ರಕರಣ ದಾಖಲಿಸಿ ಶಿಸ್ತು ಕ್ರಮ ವಹಿಸಲಾಗುತ್ತದೆ ಎಂದು ಉಪಲೋಕಾಯುಕ್ತರಾದ ಬಿ.ವೀರಪ್ಪ ತಿಳಿಸಿದರು.

ನಗರದ ನೂರು ಹಾಸಿಗೆ ಆಸ್ಪತ್ರೆಗೆ ಶುಕ್ರವಾರ ದಿಢೀರ್ ಭೇಟಿ ನೀಡಿದ ಅವರು ಔಷಧಾಲಯ ಪರಿಶೀಲಿಸಿ ದಾಸ್ತಾನುಗಳ ಲಭ್ಯತೆ, ಅವಧಿ ಮೀರಿದ ಔಷಧಿ ಪರಿಶೀಲನೆ ನಡೆಸಲಾಯಿತು. ಆಸ್ಪತ್ರೆಗೆ ಆಗಮಿಸಿದ್ದ ರೋಗಿಗಳ ನೋಂದಾಣಿ ಚೀಟಿ ವೀಕ್ಷಿಸಿ ಆಸ್ಪತ್ರೆಯ ಸೇವೆಯ ಬಗ್ಗೆ ಮಾಹಿತಿ ಪಡೆದರು. ಸಾಮಾನ್ಯ ವಾರ್ಡಿನಲ್ಲಿ ದಾಖಲಾಗಿದ್ದ ಬಾಲಕಿಯೋರ್ವಳ ಕುಶಲೋಪರಿ ವಿಚಾರಿಸಿದರು. ಬಾಲಕಿಯ ಪಾಲಕಿ ನಗರದ 10 ನೇ ವಾರ್ಡಿನ ಜಿ.ಟಿ.ಕಾಪೌಂಡು ಏರಿಯಾದಲ್ಲಿ ಪೂರೈಕೆಯಾಗುವ ನೀರು ದುರ್ವಾಸನೆ ಬೀರುತ್ತದೆ. ಅದರಿಂದಾಗಿ ಹುಷಾರಿಲ್ಲದೇ ಆಸ್ಪತ್ರೆಗೆ ದಾಖಲಿಸುವಂತಾಗಿದೆ ಎಂದು ದೂರಿದರು. ಕೂಡಲೇ ತಹಶೀಲ್ದಾರ ಎಂ.ಶೃತಿ ಅವರಿಗೆ ಪೂರೈಕೆಯಾಗುತ್ತಿರುವ ನೀರಿನ ಪರೀಕ್ಷಿಸಿ ವರದಿ ನೀಡಲು ಸೂಚಿಸಿದರು. ಇದೇ ವೇಳೆ ಆಸ್ಪತ್ರೆ ಆವರಣದಲ್ಲಿ ಕುಡಿದು ಬಂದಿದ್ದ ವ್ಯಕ್ತಿಯನ್ನು ಕಂಡು ಪೊಲೀಸ್ ಅಧಿಕಾರಿಗಳು ಆಸ್ಪತ್ರೆ ಆವರಣದಲ್ಲಿ ಯಾವುದೇ ವ್ಯಕ್ತಿಗಳು ಕುಡಿದು ಬಂದರೆ, ಮದ್ಯಪಾನ ಮಾಡಿದರೇ ಮುಲಾಜಿಲ್ಲದೇ ಅಂತಹವರ ವಿರುದ್ದ ಕೇಸ್ ದಾಖಲಿಸುವಂತೆ ಸೂಚಿಸಿದರು. ನಂತರ ಆಸ್ಪತ್ರೆಯ ಸಿಬ್ಬಂದಿಗಳ ಹಾಜರಾತಿ, ದಿನವಹಿ, ಚಲನವಲನ ಪುಸ್ತಕಗಳನ್ನು ಪರಿಶೀಲಿಸಿದರು. ನಿನ್ನೆ ಸಭೆಯಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಔಷಧಿ ಹೊರಗಡೆ ಬರೆಯದಂತೆ, ಬರೆದರೇ ಅಮಾನತುಗೊಳಿಸುವಂತೆ ಆದೇಶಿಸಿ ಸುತ್ತೋಲೆ ಪ್ರಕಟಿಸಲು ಡಿಹೆಚ್ಓ ಶಂಕರನಾಯ್ಕರಿಗೆ ಸೂಚಿಸಿದ್ದರು. ಅದರ ಪ್ರತಿ ತೋರಿಸಲು ಕೇಳಿದಾಗ ಡಿಹೆಚ್ಓ ನಿರುತ್ತರ ಕಂಡು ಸಿಡಿಮಿಡಿಗೊಂಡರು. ಆದೇಶ ಪಾಲಿಸದೇ ನಿರ್ಲಕ್ಷ್ಯಿಸಿದ್ದಕ್ಕೆ ಪ್ರಕರಣ ದಾಖಲಿಸಲು ಸೂಚಿಸಿದರು.

ಆಸ್ಪತ್ರೆ ಸಿಬ್ಬಂದಿ ಎಇಒ ನಾಗರಾಜ್, ಅಂಬ್ಯುಲೆನ್ಸ್ ಚಾಲಕ ಪ್ರದೀಪ್, ಶಿವಕುಮಾರ್ ನಾಯ್ಕ ಫೋನ್ ಪೇ ಖಾತೆ ಪರಿಶೀಲಿಸಿದರು. ಯುಪಿಐನಲ್ಲಿ ವೇತನಕ್ಕಿಂತ ಹೆಚ್ಚು ಹಣ ಚಲಾವಣೆ ಕಂಡು ಈ ಮೂವರ ಸಿಬ್ಬಂದಿಗಳ 6 ತಿಂಗಳ ಬ್ಯಾಂಕ್ ಸ್ಟೇಟಮೆಂಟ್ ಸಲ್ಲಿಸಲು ಸೂಚಿಸಿದರು. ಜಿಲ್ಲೆಯ ಎಲ್ಲಾ ತಾಲೂಕು ಆಸ್ಪತ್ರೆಗಳ ಸಮರ್ಪಕ ಮಾಹಿತಿಯನ್ನು ಒದಗಿಸಲು ಡಿಹೆಚ್ಓ ಶಂಕರನಾಯ್ಕರಿಗೆ ಅದೇಶಿಸಿದರು.

**ತಾಯಿ ಮಕ್ಕಳ ಆಸ್ಪತ್ರೆಗೆ ಭೇಟಿ :** ಉಪ ಲೋಕಾಯುಕ್ತರ ನೇತೃತ್ವದಲ್ಲಿ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿದರು. ಹೆರಿಗೆ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಾಣಂತಿಯರನ್ನು ಮಾತನಾಡಿಸಿ ಸೇವೆಗಳ ಬಗ್ಗೆ ಮಾಹಿತಿ ಪಡೆದರು. ಬಿಸಿನೀರು, ಸ್ವಚ್ಛತೆ, ಅಹಾರ ಪೂರೈಕೆ ಬಗ್ಗೆ ಮಾಹಿತಿ ಪಡೆದರು. ಬೆಳಗಿನ ಉಪಹಾರ ಹಾಲು ಬ್ರೆಡ್ ನೀಡುತ್ತಿದ್ದಾರೆಂದು ತಿಳಿದು ಬ್ರೆಡ್ ನೀಡುವ ಬದಲಾಗಿ ಉಪಹಾರ ನೀಡಲು ಸೂಚಿಸಿದರು. ಬ್ರೆಡ್ ಬಳಸದಂತೆ ವೈದ್ಯರು ಸಲಹೆ ನೀಡಬೇಕು, ಆದರೆ ಕಡಿಮೆ ವೆಚ್ಚದಲ್ಲಿ ಸಿಗಲಿದೆ ಎಂದು ಪೂರೈಕೆ ಮಾಡುತ್ತೀದ್ದಿರಾ ಎಂದು ಪ್ರಶ್ನಿಸಿದರು. ಆಸ್ಪತ್ರೆಯಲ್ಲಿ ಗರ್ಭಧಾರಣೆಯ ಬಗ್ಗೆ ಸಮರ್ಪಕ ದಾಖಲೆ ನಿರ್ವಹಣೆ ಕೊರತೆ ಕಂಡು ಬೇಸರ ವ್ಯಕ್ತಪಡಿಸಿದರು.

ಆಸ್ಪತ್ರೆಯಲ್ಲಿ ವೈದ್ಯರ ಹಾಜರಾತಿ ಹೆಚ್ಚಿದ್ದರು ಚಿಕಿತ್ಸೆ ಲಭ್ಯವಿಲ್ಲ ಎಂದು ಅನೇಕ ದೂರುಗಳು ಬಂದಿವೆ. ನಿಗಧಿತ ಸಮಯಕ್ಕೆ ವೈದ್ಯರು ಸೇವೆ ನೀಡಲಿ ನಿರ್ಲಕ್ಷ್ಯತನ ಬೇಡ ಬಡ ಜನರಿಗೆ ಸರ್ಕಾರಿ ಆಸ್ಪತ್ರೆಗಳೇ ಆಧಾರ. ಹಣ ಭರಿಸುವ ಶಕ್ತಿ ಇರುವವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ ಎಂದು ವೈದ್ಯರಿಗೆ ತಿಳಿ ಹೇಳಿದರು. ಆಸ್ಪತ್ರೆಯಲ್ಲಿ ಮೆಡಿಕಲ್ ಬೋರ್ಡ್ ಸಕ್ರಿಯವಿಲ್ಲ. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮೆಡಿಕಲ್ ಬೋರ್ಡ್‌ನ ಅನುಮತಿ ಇಲ್ಲದೇ ಹೆರಿಗೆ ಮಾಡಿಸಲಾಗುತ್ತಿದೆ, ಆದರೆ ವೈದ್ಯಕೀಯ ಮಂಡಳಿ ಸಭಾ ನಡಾವಳಿ ಇಲ್ಲದೇ ಅನೇಕ ಸಿಜೆರಿಯನ್ ನಡೆಸಿರುವುದು ಕಂಡು ಬಂದಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಡಿಹೆಚ್ಓ ಶಂಕರ ನಾಯ್ಕ, ಅರ್‌ಸಿಹೆಚ್ ಅಧಿಕಾರಿ ಜಂಬಯ್ಯ, ಅಪರ ಜಿಲ್ಲಾಧಿಕಾರಿ ಈ.ಬಾಲಕೃಷ್ಣಪ್ಪ, ಹೆಚ್ಚುವರಿ ಎಸ್ಪಿ ಸಲೀಂ ಪಾಷಾ, ನಗರಸಭೆ ಆಯುಕ್ತ ಮನೋಹರ, ತಹಶೀಲ್ದಾರ ಎಂ.ಶೃತಿ ಸೇರಿದಂತೆ ಲೋಕಾಯುಕ್ತ ಅಧಿಕಾರಿಗಳು ಇದ್ದರು.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ | ಸಂವತ್ಸರ: ಕ್ರೋಧಿ

**15–03–2025 – ಶನಿವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉ.ಫಾಲ್ಗುಣಿ |
| ಯೋಗ | : ಗಂಡ |
| ಕರಣ | : ಕೌಳವ |
| ಸೂರ್ಯೋದಯ | : 09:36:57 |
| ಸೂರ್ಯಾಸ್ತ | : 18:34:52 |
| ರಾಹು ಕಾಲ | : .9:36–11:06 |
| ಯಮಘಂಡ ಕಾಲ | : 14:06–15:35 |
| ಗುಳಿಕ ಕಾಲ | : 06:37–08:07 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 14–03–2025


| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.05 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9949 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 22.907 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1583.96 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2025 ಕ್ಯುಸೆಕ್ |
| ಸಾಮರ್ಥ್ಯ | 6.663 ಟಿಎಂಸಿ |

### ಉಪಲೋಕಾಯುಕ್ತ ಬಿ.ವೀರಪ್ಪ ಅಧಿಕಾರಿಗಳಿಗೆ ಸೂಚನೆ

# ಸರ್ಕಾರಿ ಸೇವೆಗಳಿಗೆ ಜನಸಾಮಾನ್ಯರನ್ನು ಅಲೆದಾಡಿಸದೆ ತ್ವರಿತ ಸೇವೆ ನೀಡಿ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರಿ ಸೇವೆಗಳಿಗೆ ಜನಸಾಮಾನ್ಯರನ್ನು ಅಲೆದಾಡಿಸಬೇಡಿ ತ್ವರಿತ ಸೇವೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಹೇಳಿದರು.

ಹೊಸಪೇಟೆ ನಗರಸಭೆ ಕಚೇರಿಗೆ ಶುಕ್ರವಾರ ಭೇಟಿನೀಡಿ ಮಾತನಾಡಿದರು. ಸರ್ಕಾರಿ ಸೇವೆಗಳ ಪಡೆಯಲು ಜನ ಸಾಮಾನ್ಯರು ರೋಸಿಹೋಗಿ ಸರ್ಕಾರದ ಅನೇಕ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ನಿರಾಸಕ್ತಿ ವಹಿಸಿದ್ದಾರೆ. ಸರ್ಕಾರಗಳಿಂದ ಅನೇಕ ಯೋಜನೆಗಳನ್ನು ರೂಪಿಸಿದರೂ ಅರ್ಹ ಫಲಾನುಭವಿಗಳಿಗೆ ತಲುಪುವಲ್ಲಿ ವಿಫಲವಾಗಿದೆ. ಬಹುತೇಕ ಯೋಜನೆಗಳ ಅರ್ಹ ಫಲಾನುಭವಿಗಳು ಅಸಹಾಯಕರಾಗಿರುತ್ತಾರೆ. ಇನ್ನೂ ಸರ್ಕಾರಿ ಕಚೇರಿಗಳಲ್ಲಿ ಒಂದೊಂದು ನಮೂನೆಗಳನ್ನು ಪಡೆಯಲು ಅಲೆದು ಸುಸ್ತಾಗಿ ಈ ಕಚೇರಿ ಸಹವಾಸವೇ ಬೇಡವೆಂದು ನಿರಾಸಕ್ತಿ ಮೂಡುತ್ತದೆ. ಹಾಗಾಗಿ ಸ್ಥಳೀಯ ಸಂಸ್ಥೆಗಳು ಜನಸ್ನೇಹಿ ಕಚೇರಿಗಳಾಗಿರಬೇಕು. ಜನರ ಬೇಡಿಕೆಗಳಿಗೆ ಸ್ಪಂದಿಸುವಂತಿರಬೇಕು ಎಂದರು.

**ಸ್ಲಂ ಬೋರ್ಡ್ ಕಚೇರಿ ಭೇಟಿ :**
ನಗರಸಭೆ ಆವರಣದಲ್ಲಿರುವ ಸ್ಲಂಬೋರ್ಡ್ ಕಚೇರಿಗೆ ಭೇಟಿ ನೀಡಿದ ಅವರು ಅಲ್ಲಿನ ಸಿಬ್ಬಂದಿಗಳಿಗಿರುವ ಮಾಹಿತಿ ಕೊರತೆ ಕಂಡು ಕಿಡಿಕಾರಿದರು. ಹೊರಗುತ್ತಿಗೆ ಸಿಬ್ಬಂದಿಗಳಾದ ಡಾಟಾ ಎಂಟ್ರಿ ಆಪರೇಟರ್ ಮತ್ತು ಸೆಕ್ಷನ್ ಆಫೀಸರ್ ಇಬ್ಬರು ಸಿಬ್ಬಂದಿಗಳ ನೇಮಕಾತಿ ಅದೇಶ ಪತ್ರ ಕೇಳಿದರು. ದಾಖಲೆ ನೀಡಲು ಎಇಇ ತಿಮ್ಮಣ್ಣ ತಡವರಿಸಿದರು. ಕನಿಷ್ಟ ಹಾಜರಾತಿ ಪುಸ್ತಕ, ದಿನವಹಿ ಮತ್ತು ಚಲನವಲನ ಪುಸ್ತಕ ನಿರ್ವಹಣೆ ಮಾಡದಿರುವುದನ್ನು ಕಂಡು ಸರ್ಕಾರಿ ಕೆಲಸ ಮಾಡೋಕೆ ಬಂದಿದ್ದೀರೋ ಯಾವುದಾದರೂ ಏಜೆನ್ಸಿ ಕೆಲಸ ಮಾಡುತ್ತಿದ್ದಿರೋ, ನಿಮಗೆ ಯಾರು ಸಂಬಳ ಕೊಡುತ್ತಾರೆ. ಕಚೇರಿಯಲ್ಲಿನ ದಾಖಲೆಗಳ ನಿರ್ವಹಣೆ ಜ್ಞಾನ ಇಲ್ಲದಿದ್ದರೇ ಹೇಗೆ ಎಂದು ತರಾಟೆ ತೆಗೆದುಕೊಂಡರು. ಕೂಡಲೇ ವಿಜಯನಗರ ಜಿಲ್ಲೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿ ಆದಾಗಿನಿಂದ ಇಲ್ಲಿಯವರೆಗೆ ಸ್ಲಂ ಜನಗಳಿಗೆ ಎಷ್ಟು ಹಕ್ಕು ಪತ್ರ ನೀಡಿದ್ದೀರಿ? ಎಷ್ಟು ಜನಕ್ಕೆ ನೋಂದಾವಣೆ ಮಾಡಿಸಿದ್ದೀರಿ? ಎಷ್ಟು ಜನಕ್ಕೆ ನಗರಸಭೆಯಿಂದ ನಮೂನೆ–3 ನೀಡಿದ್ದೀರಿ ವರದಿ ನೀಡಬೇಕು ಇಲ್ಲವಾದರೇ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

**ನಗರಸಭೆ ಕಚೇರಿ ಭೇಟಿ :**
ನಗರಸಭೆಯ ಆರೋಗ್ಯ ವಿಭಾಗ, ಆಡಳಿತ ವಿಭಾಗ, ಅಭಿಯಂತರರ ವಿಭಾಗಗಳಲ್ಲಿ ದಾಖಲೆ ಪರಿಶೀಲನೆ ನಡೆಸಲಾಯಿತು. ಪರಿಸರ ಅಭಿಯಂತರ ಜಿ.ಆರತಿ ಅವರಿಗೆ ನಗರದಲ್ಲಿ ಅನೇಕ ವ್ಯಾಪಾರಸ್ಥರಿಗೆ ಟ್ರೇಡ್ ಲೈಸನ್ಸ್ ನೀಡದಿರುವ ಬಗ್ಗೆ ಮಾಹಿತಿ ಪಡೆದರು. ರಸ್ತೆ ಬದಿಯಲ್ಲಿ ಚರಂಡಿಗಳ ಮೇಲೆ ಹೋಟೆಲ್‌ಗಳನ್ನು ತೆರೆದಿದ್ದಾರೆ. ಹೋಟೆಲ್ ತಾಜ್ಯವನ್ನು ಅದೇ ಚರಂಡಿಯಲ್ಲಿ ಬಿಸಾಡುತ್ತಾರೆ. ಇದನ್ನು ಇಂದೇ ಸ್ಥಳ ಪರಿಶೀಲಿಸಿ ಜಾಗೃತಿ ಮೂಡಿಸಿ ಇಲ್ಲದಿದ್ದರೇ ಅಮಾನತುಗೊಳಿಸಲು ಕ್ರಮವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರಸಭೆ ಎಲ್ಲಾ ವಾಹನಗಳ ವಿಮೆ ಮತ್ತು ಅರ್ಹತಾ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಯಿತು. ಅದರಲ್ಲಿ ಬಹುತೇಕ ವಾಹನಗಳ ಅರ್ಹತಾ ಪ್ರಮಾಣ ಪತ್ರ ಇಲ್ಲದಿರುವುದು ಕಂಡು ಅಶ್ಚರ್ಯಗೊಂಡರು. ಸರ್ಕಾರಿ ವಾಹನಗಳೆಂದು ವಿನಾಯಿತಿ ಇದೆಯೇನ್ರಿ ಅರ್ಹತಾವಿಲ್ಲದೇ ವಾಹನಗಳಿಗೆ ಅದ್ಹೇಗೆ ವಿಮೆ ಪಾವತಿಸಿದಿರಿ ಎಂದು ನಗರಸಭೆ ಆಯುಕ್ತ ಮನೋಹರರಿಗೆ ಪ್ರಶ್ನಿಸಿದರು. ಪ್ರತಿಕ್ರಿಯಿಸಿದ ಆಯುಕ್ತರು ಮಾಹಿತಿ ತಪ್ಪಾಗಿರಬಹುದು ಇನ್ನೊಮ್ಮೆ ಪರಿಶೀಲಿಸುವೆ ಅರ್ಹತಾ ಪ್ರಮಾಣ ಪತ್ರ ಇರಬೇಕು ಎಂದು ಸಮರ್ಥಿಸಿಕೊಂಡರು. ಆರ್‌ಟಿಓ ಅಧಿಕಾರಿಗಳಿಗೆ ಪರಿಶೀಲಿಸಲು ಕ್ರಮವಹಿಸಲಾಗುವುದು ತಪ್ಪು ಕಂಡರೇ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

**ತಾಲೂಕು ಕಚೇರಿ ಭೇಟಿ :** ನಗರದ ತಾಲೂಕು ಕಚೇರಿಗೆ ಉಪಲೋಕಾಯುಕ್ತರ ತಂಡ ಭೇಟಿ ನೀಡಿ. ಸಾಮಾಜಿಕ ಭದ್ರತಾ ಯೋಜನೆಗಳ ಅರ್ಜಿಗಳನ್ನು ಪರಿಶೀಲಿಸಲಾಯಿತು. ಅವುಗಳಲ್ಲಿ ಬಹುತೇಕ ಅರ್ಜಿಗಳು ತಿರಸ್ಕೃತಗೊಂಡ ಬಗ್ಗೆ ತಹಶೀಲ್ದಾರ ಎಂ.ಶೃತಿರವರಿಗೆ ಪ್ರಶ್ನಿಸಲಾಯಿತು. ಪ್ರತಿಕ್ರಿಯಿಸಿದ ಅವರು ಅನ್ಲೈನ್ ಸೆಂಟರ್‌ಗಳಲ್ಲಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಿರುವುದರಿಂದ ಅಪೂರ್ಣ ಮಾಹಿತಿ ನೀಡಿರುತ್ತಾರೆ ಹಾಗಾಗೀ ತಿರಸ್ಕೃತಗೊಂಡಿವೆ ಎಂದರು. ತಹಶೀಲ್ದಾರ ಕಚೇರಿಯಲ್ಲಿ ಹಾಜರಾತಿ, ದಿನವಹಿ ಪುಸ್ತಕ, ಚಲನವಲನ ಪುಸ್ತಕ ಸೇರಿದಂತೆ ವಿವಿಧ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**ನೋಂದಣಿ ಕಚೇರಿಯಲ್ಲಿ ಅಧಿಕಾರಿಗೆ ತರಾಟೆ:**
ತಾಲೂಕು ಕಚೇರಿ ಆವರಣದಲ್ಲಿರುವ ನೋಂದಣಿ ಕಚೇರಿಗೆ ದಿಢೀರ್ ಭೇಟಿ ನೀಡಿದ ಉಪಲೋಕಾಯುಕ್ತರು ಅನೇಕ ದಾಖಲೆಗಳನ್ನು ಪರಿಶೀಲಿಸಿದರು. ನೋಂದಣಿ ಅಧಿಕಾರಿಗಳ ಮೊಬೈಲ್‌ನಲ್ಲಿ ಫೋನ್‌ಪೇನಲ್ಲಿನ ಹಣದ ವರ್ಗಾವಣೆಗಳನ್ನು ಕಂಡು ಲೋಕಾಯುಕ್ತ ಅಧಿಕಾರಿಗಳು ಬೆರಗಾದರು. ಒಂದೇ ದಿನದಲ್ಲಿ ಅಧಿಕ ಮೊತ್ತದ ಹಣದ ವರ್ಗಾವಣೆಗಳನ್ನು ಗಮನಿಸಿ 6 ತಿಂಗಳ ಬ್ಯಾಂಕ್ ಖಾತೆಯ ಮಾಹಿತಿ ನೀಡುವಂತೆ ತಿಳಿಸಿದರು. ನೋಂದಾಣಿ ಕಚೇರಿಯಲ್ಲಿ ದಲ್ಲಾಳಿಗಳು ಮಿತಿ ಮೀರಿದ್ದಾರೆಂದು ಅನೇಕ ದೂರುಗಳಿವೆ. ದಾಖಲೆ ನಿರ್ವಹಣೆಯಲ್ಲಿ ಸಮರ್ಪಕ ಮಾಹಿತಿ ನೀಡುತ್ತಿಲ್ಲ. ಪ್ರತಿ ಪ್ರಶ್ನೆಗೂ ಸುಳ್ಳು ಹೇಳುತ್ತಿದ್ದೀರಿ ಎಂದು ಗದರಿದರು. ಅಗತ್ಯ ದಾಖಲೆಗಳನ್ನು ವರದಿ ನೀಡುವಂತೆ ಎಚ್ಚರಿಕೆ ನೀಡಲಾಯಿತು.

ಈ ವೇಳೆ ಅಪರ ಜಿಲ್ಲಾಧಿಕಾರಿ ಈ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ವಿವೇಕಾನಂದ, ನಗರಸಭೆ ಆಯುಕ್ತ ಮನೋಹರ, ತಹಶೀಲ್ದಾರ ಎಂ.ಶೃತಿ ಸೇರಿದಂತೆ ಲೋಕಾಯುಕ್ತ ಅಧಿಕಾರಿಗಳಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆ ಮಾರ್ಚ್ 21 ರಿಂದ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಹಿಂದಿ

**10 ನೇ ತರಗತಿ** — **ಹಿಂದಿ** — **ಬಹು ನಿರೀಕ್ಷಿತ ಪ್ರಶ್ನೆಗಳು**

### ईमानदारों के सम्मेलन में

**01)फूल मालाएँ मिलने पर लेखक क्या सोचने लगे ?**

फूल मालाएँ मिलने पर लेखक ने इस तरह सोचने लगा कि - आस - पास कोई माली होता तो पहने हुए फूल मालाएँ भी बेचकर पैसे जमा कर लेता था |

**02) चप्पलों की चोरी होने पर ईमानदार डेलीगेट ने क्या सुझाव दिया ?(April -2023)**

चप्पलों की चोरी होने पर ईमानदार डेलीगेट ने इस तरह सुझाव दिया कि -“ देखिए, चप्पलें एक जगह नही उतारनी चाहिए | एक ही जगह जोडी होगी , तो कोई भी पहन लेगा | मैने ऐसा ही किया था | ’’

**03) लेखक ने कमरा छोडकर जाने का निर्णय क्यो लिया ? ( 2019, June -2023 )**

सम्मेलन में लेखक के सभी सामान चोरी हो गये थे | ताला तक चुरा लिया गया था | अब वे बचे थे | अगर वे वहीं रूके तो वे भी चुरा हो जाने की संभावना थी | इसलिए लेखक ने कमरा छोडकर जाने का निर्णय लिया |

**04) लेखक को भेजे गये निमंत्रण पत्र में क्या लिखा गया ?**

लेखक को भेजे गये निमंत्रण पत्र में इस तरह लिखा गया था कि - “ हम लोग इस शहर में एक ईमानदार सम्मेलन कर रहे हैं | आप देश के प्रसिद्ध ईमानदार हैं | हमारी प्रार्थना है कि आप इस सम्मेलन का उद्घाटन करें | हम आपको आने- जाने का पहले दर्जे का किराय देंगे तथा आवास, भोजन आदी का उत्तम व्यवस्था करेंगे | आपके आगमान से ईमानदार तथा उदीयमान ईमानदारों को बडी प्रेरणा मिलेगी |

### समय की पहचान

**1) समय का सदुपयुग कैसे करना चाहिए |**

* समय बहुत अनमोल है | उसका महत्व धन से भी ज्यादा है |
* आलस छोडकर काम करना चाहिए |
* समय को सच्चा साथी बना लेना चाहिए |
* हमें काम करने का जो अवसर मिलता है, उसे व्यर्थ जाने नही देना चाहिए |

**2) समय की पहचान कविता के अंतिम चार पंक्तियो में कवि क्या कहना चाहता है ?**

समय की पहचान कविता के अंतिम चार पंक्तियों में कवि इस तरह कहना चाहता है कि -
* जो काम करते है उसे मन लगाकार करना चाहिए |
* अपनी आत्म पर विश्वास रखना चाहिए |
* हमारा संदेह को दूर भगाना चाहिए |
* हमें मिला समय को ही अच्छा मानना चाहिए |

### दुनिया में पहला मकान

**I . अनुरूपता :**

1) मछली : तैरना :: साँप : ------- **( रेंगना )**

2) मकान की छत : मछली की पीठ जैसी :: मकान के स्तंभ : ----- **(हाथी के पैर जैसे )**

**03)लालिम और किंचा लालीदाम जंगल की ओर क्यो चल पडे ?**

किन्द्रु लालिम और किंचा लालीदाम नामक दो दोस्तों ने तय किया कि वे मकान मनाएँगे | मुश्किल यह था कि वे नहीं जानते थे कि मकान कैसे बनाए जाते हैं, इसलिए पशुओं से पूछ -ताछ करने के लिए जंगल की ओर चल पडे |

**04) हाथी ने दोस्तों को क्या उत्तर दिया ?**

हाथी ने दोस्तों को इस तरह उत्तर दिया है कि - इसमें क्या कठिनाई है ? पेडों से लकडी के इतने मोटे और मजबूत गोले काट लो, जितने मेरे पैर हैं | आगे की बात तो मै नही जानता | मुझे रत्ती-भर पता नहीं |

**05) साँप ने दोस्तों को क्या सुझाव दिया ?**

साँप ने दोस्तों को इस तरह सुझाव दिया है कि ऐसा करो कि लकडी ऐसी पतली और लंबी काटो जैसा मैं हूँ | आगे की बात तो मै नही जानता | मुझे रत्ती - भर पता नहीं |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ